**Phone:** 91- 080-23330149
080-23330984

**Website :**www.uasbangalore.edu.in
**Email :**registrar@uasbangalore.edu.in

# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

**ಕುಲಸಚಿವರ ಕಛೇರಿ, ನಾಯಕ್ ಭವನ, ಗಾಕೃವಿಕೆ, ಬೆಂಗಳೂರು**

# UNIVERSITY OF AGRICULTURAL SCIENCES, BANGALORE

**Office of the Registrar, Naik Bhavan, GKVK, Bengaluru-560065**

ಸಂಖ್ಯೆ: ಕು.ಸ/ಸಕು/ಹಿ.ಕ್ಷೆ.ಸ/ದೂ.ಶಿ.ಘ/ಕೃಷಿ ಡಿಪ್ಲೊಮಾ/2025–26 ದಿನಾಂಕ:27.02.2026

## ಅಧಿಸೂಚನೆ

ವಿಷಯ: 2026–27ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ವಿಸ್ತರಣಾ ನಿರ್ದೇಶನಾಲಯದ ದೂರ ಶಿಕ್ಷಣ ಘಟಕ ನಡೆಸುವ ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ

ಉಲ್ಲೇಖ: 1. ವಿಸ್ತರಣಾ ನಿರ್ದೇಶಕರು, ದೂ.ಶಿ.ಘ/ಅರ್ಜಿ ಆಹ್ವಾನ/ 959/ ಇವರ ಪ್ರಸ್ತಾವನೆ ದಿನಾಂಕ:20.02.2026.

2. ಶಿಕ್ಷಣ ನಿರ್ದೇಶಕರು ಹಾಗೂ ಮಾನ್ಯ ಕುಲಪತಿಗಳು, ಕೃವಿವಿ, ಬೆಂಗಳೂರು ಇವರ ಅನುಮೋದನೆ ದಿನಾಂಕ:26.2.2026

## ದೂರ ಶಿಕ್ಷಣ ಕೋರ್ಸ್‌ಗಳ ವಿವರ

<table>
<tr><th>ಕ್ರಮ ಸಂ.</th><th>ಕೋರ್ಸ್‌ಗಳು</th><th>ಕೋರ್ಸ್‌ಗಳ ಅವಧಿ</th><th>ಅರ್ಜಿ ಶುಲ್ಕ (ರೂ.)</th><th>ಕೋರ್ಸ್ ಶುಲ್ಕ (ರೂ.)</th><th>ಅರ್ಜಿ ದೊರೆಯುವ ವಿಳಾಸ</th><th>ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸುವ ವಿಳಾಸ</th><th>ವಿದ್ಯಾರ್ಹತೆ</th><th>ಬೋಧನಾ ಮಾಧ್ಯಮ</th></tr>
<tr><td colspan="9">ಡಿಪ್ಲೊಮಾ ಕೋರ್ಸ್‌ಗಳು</td></tr>
<tr><td>01</td><td>PGDA<br>(Post Graduate Diploma in Agriculture)</td><td>One Year<br>(Two Semesters)</td><td>100/-</td><td>12,000/</td><td>Download from (www.uasbangalore.edu.in)</td><td>Distance Education Unit, Directorate of Extension, UAS, GKVK, Bengaluru</td><td>Bachelor's Degree from recognized State Agricultural Universities</td><td>English</td></tr>
<tr><td>02</td><td>ಒಂದು ವರ್ಷದ ಕೃಷಿ ಡಿಪ್ಲೊಮಾ</td><td>ಒಂದು ವರ್ಷ (2ಸೆಮಿಸ್ಟರ್‌ಗಳು)</td><td>100/-</td><td>10,000/</td><td rowspan="6">ದೂರ ಶಿಕ್ಷಣ ಘಟಕ, ವಿಸ್ತರಣಾ ನಿರ್ದೇಶನಾಲಯ ಕೃಷಿ ವಿಶ್ವವಿದ್ಯಾನಿಲಯ ಜಿಕೆವಿಕೆ, ಬೆಂಗಳೂರು–560065 ಅಥವಾ ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಕೃಷಿ ವಿಜ್ಞಾನ ಕೇಂದ್ರಗಳು</td><td rowspan="6">ದೂರ ಶಿಕ್ಷಣ ಘಟಕ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ ಜಿಕೆವಿಕೆ, ಬೆಂಗಳೂರು–560065</td><td>ಎಸ್.ಎಸ್.ಎಲ್.ಸಿ</td><td>ಕನ್ನಡ</td></tr>
<tr><td colspan="5">ಸರ್ಟಿಫಿಕೇಟ್ ಕೋರ್ಸ್‌ಗಳು</td><td colspan="2"></td></tr>
<tr><td>01</td><td>ಕೃಷಿಯಲ್ಲಿ ಬೀಜೋತ್ಪಾದನೆ ತಾಂತ್ರಿಕತೆಗಳು</td><td>12 ತಿಂಗಳು</td><td>100/-</td><td>3,000/-</td><td>ಎಸ್.ಎಸ್.ಎಲ್.ಸಿ</td><td>ಕನ್ನಡ</td></tr>
<tr><td>02</td><td>ಕೃಷಿಯಲ್ಲಿ ಯಂತ್ರೋಪಕರಣಗಳ ನಿರ್ವಹಣೆ</td><td>12 ತಿಂಗಳು</td><td>100/-</td><td>3,000/-</td><td>ಎಸ್.ಎಸ್.ಎಲ್.ಸಿ</td><td>ಕನ್ನಡ</td></tr>
<tr><td>03</td><td>ಜೇನು ಸಾಕಣೆ</td><td>12 ತಿಂಗಳು</td><td>100/-</td><td>3,000/-</td><td>07ನೇ ತರಗತಿ</td><td>ಕನ್ನಡ</td></tr>
<tr><td>04</td><td>ಸಮಗ್ರ ಕೃಷಿ</td><td>12 ತಿಂಗಳು</td><td>100/-</td><td>1,500/-</td><td>07ನೇ ತರಗತಿ</td><td>ಕನ್ನಡ</td></tr>
</table>

ನಿಗದಿತ ಅರ್ಜಿ ಶುಲ್ಕವನ್ನು ಡಿ.ಡಿ.ಮೂಲಕ **Comptroller, UAS, GKVK, Bengaluru** ಇವರ ಹೆಸರಿನಲ್ಲಿ ಪಡೆಯತಕ್ಕದ್ದು. ಅರ್ಜಿಗಳನ್ನು ಮೇಲೆ ತಿಳಿಸಿದ ವಿಳಾಸದಲ್ಲಿ **ದಿನಾಂಕ:09.03.2026 ರಿಂದ 11.04.2026** ರವರೆಗೆ ಪಡೆಯಬಹುದು ಅಥವಾ ವೆಬ್‌ಸೈಟ್‌ನಲ್ಲಿಯು ಡೌನ್‌ಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಅರ್ಜಿಗಳನ್ನು **ದಿನಾಂಕ:11.04.2026 (ಮಧ್ಯಾಹ್ನ 4.00 ರ ಒಳಗೆ) ದೂರ ಶಿಕ್ಷಣ ಘಟಕ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು–560065** ರವರಿಗೆ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.uasbangalore.edu.in ನಲ್ಲಿ ಪಡೆಯಬಹುದು ಅಥವಾ ದೂರವಾಣಿ ಸಂಖ್ಯೆ: 080–23636353 ಸಂಪರ್ಕಿಸತಕ್ಕದ್ದು.

ಆದೇಶದ ಮೇರೆಗೆ,

(ಮುದ್ರೆ: ಕೃವಿವಿ, ಜಿ.ಕೆ.ವಿ.ಕೆ. ಕುಲಸಚಿವರು ಬೆಂಗಳೂರು -560 065)

ಕುಲಸಚಿವರು

ಇವರಿಗೆ:

ಸಂಯೋಜಕರು ಮತ್ತು ಮುಖ್ಯಸ್ಥರು
ದೂರ ಶಿಕ್ಷಣ ಘಟಕ, ವಿಸ್ತರಣಾ ನಿರ್ದೇಶನಾಲಯ
ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು –65

ಪ್ರತಿಗಳು ಗೌರವಪೂರ್ವಕವಾಗಿ:

1. ಶಿಕ್ಷಣ ನಿರ್ದೇಶಕರು, ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು – ಮಾಹಿತಿಗಾಗಿ
2. ವಿಸ್ತರಣಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು – ಸೂಕ್ತ ಕ್ರಮಕ್ಕಾಗಿ
3. ಸಹಾಯಕ ಕುಲಸಚಿವರು, ಕುಲಸಚಿವರ ಕಛೇರಿ, ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆವಿಕೆ. ಬೆಂಗಳೂರು
4. ಆಪ್ತ ಕಾರ್ಯದರ್ಶಿಗಳು ಕುಲಪತಿಗಳರವರ ಕಛೇರಿ, ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆವಿಕೆ. ಬೆಂಗಳೂರು–ಮಾಹಿತಿಗಾಗಿ
5. ಕಛೇರಿ ಕಡತಕ್ಕೆ.


ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು


UNIVERSITY OF AGRICULTURAL SCIENCES, BANGALORE

# POST GRADUATE DIPLOMA IN AGRICULTURE (PGDA)

*PROSPECTUS*

2026-27






**DISTANCE EDUCATION UNIT**
**DIRECTORATE OF EXTENSION**
**UNIVERSITY OF AGRICUTLURAL SCIENCES**
**GKVK, BANGALORE-560 065**

**Phone: 080-23636353**
**E-mail:** deuasbangalore@gmail.com
**Website:** http://www.uasbangalore.edu.in.

## UNIVERSITY AT GLANCE

The University of Agricultural Sciences, Bangalore (UASB) came into existence in 1964. The mission of the University is to achieve excellence in teaching, research and extension services related to agriculture and allied sciences. The University endeavors to keep pace with new frontiers of science and to be scientifically and technically competent. In this context, the UAS (B), is strongly committed to absorbing newer paradigms in science and technology and ensure their dissemination to the farming community of the state and country. The University provides extension services through a range of units such as Krishi Vignana Kendras, Extension Education Unit, Farmers Training Institute, Staff Training Unit, SAMETI (South), Agricultural Technology Information Centre, Farm Information Unit, Agricultural Sciences Museum and National Agricultural Extension Project.

UASB has been among the top universities in the country in agriculture, has been twice recognized with prestigious Sardhar Patel Outstanding ICAR Institute Award; garnered second position in ICAR-JRF Examination-2013 and at present, it is ranked 11$^{th}$ among 107 state agricultural universities in India. UASB is accredited with A+ from National Assessment and Accreditation Council (NAAC). The university offers one year Post Graduate Diploma in Agriculture (PGDA) for the farm science graduates.

## ABOUT THE COURSE- PGDA

The Post Graduate Diploma in Agriculture (PGDA) is a one year (two- semesters) course offered on a distance learning mode. The program offers an excellent opportunity to study systematically the different subjects of agriculture and build the confidence among farm science graduates.

### Objective of the PGDA

To enhance the technical competence of farm science Graduates in Agriculture and Allied subjects.

**Eligibility:** Bachelor's Degree in Agriculture and Allied Sciences from a recognized State Agriculture Universities (SAUs).

**Medium of instruction :** English
**Duration** : One year (two semesters)

## GENERAL INFORMATION & ADMISSION PROCEDURE

1. The candidates are required to read the prospectus carefully before filling the Application Form for admission to the course. The prospectus provides general information and is subject to the provisions of the relevant academic regulations.

2. Right of Admission is reserved with the University.

3. The candidates may download application forms from UASB website **http://www.uasbangalore.edu.in** or application may be obtained in person from the Distance Education Unit, Farmers Training Institute Building, Directorate of Extension, UAS, GKVK, Bangalore-560065 by paying a fee of Rs. 100/- through DD drawn in favour of Comptroller, UASB, payable at GKVK, Bangalore.

4. The filled in application downloaded through the website may be submitted along with the prescribed fee of Rs. 100/- in the form of Account Payee Demand Draft drawn in favour of Comptroller, UASB and payable at GKVK, Bangalore.

5. The filled in application in all respect along with copies of relevant documents should be submitted either in person or by post, to the Director of Extension, Directorate of Extension, UAS, GKVK Bangalore-560 065, on or before the last date for submission.

6. The Application Fee is non-refundable and no correspondence on this subject will be entertained.

7. Incorrect and incomplete applications are liable for rejection. Admission of a candidate may be cancelled at any time, if any information furnished by the candidate at the time of admission is found to be incorrect or if the candidate has been wrongly admitted due to any reason.

8. The list of admitted candidates will be uploaded in University website http://www.uasbangalore.edu.in.

9. If a candidate fails to complete the admission formalities within the prescribed date, he/she will automatically lose admission.

10. Candidates who are unable to complete the program within two years are required to register themselves afresh through re-admission by paying the requisite fee of Rs. 12000/- as per the University regulations.

11. Candidates are requested to read the instructions relating to examinations carefully

12. No separate intimation will be sent regarding examinations but the date of examination will be notified on the UAS website and notice board of the Distance Education Unit, Farmers Training Institute building, Directorate of Extension, UAS, GKVK, Bangalore.

13. The enrollment number issued by the Distance Education Unit needs to be produced at time of examination.

**Course fee and list of enclosures**

The candidates whose admission is confirmed will be intimated and they need to pay the annual course fee of Rs. 12000/- (or Rs. 6000/- for each semester in two installments at the beginning of each semester) through DD drawn in favour of Comptroller, UAS, GKVK, Bangalore.

Following enclosures are to be submitted along with the application for registration:

1. Secondary School Certificate (Date of birth proof).
2. Degree Marks card/ Degree Certificate
3. Experience Certificates from current or former employer (if employed)
4. Two pass port size photographs. (Place it in an envelope / cover)
5. DD for Rs. 12000/- (or Rs. 6000/- for each semester)

**Criteria for selection of candidates**

On receiving and scrutinizing the applications, the list of selected candidates will be prepared based on academic qualifications. The Admission Committee will be the final authority to decide the number of candidates to be admitted.

Verification of all the original certificates will be done on the fixed date (see the calendar of events) during the beginning of the first semester and have to pay the prescribed fee. The candidates are required to produce their original certificates. Candidates will be permitted to appear for the semester-end contact classes and examination only after this verification. Until then, their admission will be provisional.

**Enrollment**

On payment of course fee, candidates will be informed of their enrollment number which will also be displayed on their enrollment cards. The enrollment number will continue for a maximum period of two years, or until the course is completed, whichever is earlier. The same number will be used as the examination roll number of the candidate.

**Self Learning Study Material**

The admitted / enrolled candidates shall be provided with self learning study material for each course at the beginning of each semester and the same can also be obtained from the Distance Education Unit in person.

**Contact Classes and Project Work**

Candidates admitted to the program are required to attend contact classes at Bangalore on their own. They also have to carry out project work as per the guidelines for the project work that will be sent separately to the admitted candidates.

## INFORMATION ON THE COURSE STRUCTURE

The curriculum of the PGDA is designed with the help of subject matter experts in the University. The semester wise courses are as detailed below.

| Course No. | Courses | Credit Hours |
|---|---|---|
| **First Semester** | | |
| PGDA 101 | Crop Production Management | 3 |
| PGDA 102 | Soil Health Management | 3 |
| PGDA 103 | Integrated Pest Management in Crop Production | 3 |
| PGDA 104 | Integrated Disease Management for Crop Production | 3 |
| PGDA 105 | Crop Varieties, Hybrids and their Seed Production | 3 |
| PGDA 106 | Watershed Development and Rainfed Farming | 3 |
| **Second Semester** | | |
| PGDA 201 | Production Economics and Agribusiness Management | 3 |
| PGDA 202 | Extension Education and Entrepreneurship Development | 3 |
| PGDA 203 | Farm Mechanization, Value Addition and Food Processing | 3 |
| PGDA 204 | Forest Management and Biodiversity Conservation | 3 |
| PGDA 205 | Nutrition Management and Food Safety | 3 |
| PGDA 206 | Precision Farming and High-Tech Horticulture | 3 |
| PGDA 207 | Project Work | |
| | **Total Credit hours for the course** | **36** |

The subject experts will conduct contact classes at the rate of one day per subject towards the end of semester in the Bangalore campus.

**CALENDER OF EVENTS** **(Tentative)**

| Sl. No. | Events | Dates |
|---|---|---|
| 1 | Issue of application and prospectus | **09-03-2026 to 11-04-2026** |
| 2 | Last Date for submitting the duly completed Application | **11-04-2026** |

## ISSUE OF MARKS CARD AND CERTIFICATE

The candidates who complete all the requirements prescribed for the course shall be issued with a certificate and a consolidated marks card.

UNIVERSITY OF AGRICULTURAL SCIENCES, BANGALORE

**APPLICATION FOR ADMISSION TO**
**POST GRADUATE DIPLOMA IN AGRICULTURE (PGDA)**

Affix your recent passport size photo with signature and attach two additional photos

Application No: ______

DD No. & Date: ______

*Read the prospectus and instructions carefully before filling up the application form. Incomplete applications will not be considered*

| | | |
|---|---|---|
| 1. Name ( in capital letters): | | |
| (a) Father's / Husband / Guardian Name: | | |
| (b) Mother's Name: | | |
| 2. Permanent address: | | |
| Taluk & District | State: | Pin : |
| Phone: Land line:<br>Mobile (Whatsapp): | Email: | |
| 3. Address for Correspondence: | | |
| 4. Date of Birth: / /<br>(DD/MM/YYYY) | 5. Sex: Male / Female: | |
| 6. Nationality: | | |
| 8. Do you belong to SC/ST/OBC/PH/Others: Yes / NO<br>(If yes, enclose the certificate issued by a competent authority) | | |
| 9. Designation (if employed) | | |
| 10. Name of the Institution | 11. Number of years of experience | |
| | | |

## 12. Particulars of past Academic records (from Bachelor's degree onwards)

| Sl. No. | Name of degree | University / college | Month & year of passing | Major subject studied | Maximum marks | Marks obtained | Percen-tage |
|---|---|---|---|---|---|---|---|
| | | | | | | | |
| | | | | | | | |
| | | | | | | | |

**DECLARATION BY CANDIDATE**

I hereby declare that all the information furnished by me in this application and the documents I have submitted in support of my application are true, complete and correct to the best of my knowledge.

Place:

Signature of the Candidate

Date:

If employed the application has to be forwarded by the employer:

Authorized Signatory of Forwarding Organization

Name:______________________________

Designation:______________________________

Organization:______________________________

With seal

Note: Application form can be downloaded from **http://www.uasbangalore.edu.in** and submit the filled application in- person or by post to The Director of Extension, Directorate of Extension, University of Agricultural Sciences, GKVK, Bangalore -560065.

**Last Date for Submission of Application: 11-04-2026**

ನ್ಯಾಕ್ ಎ+ ಮಾನ್ಯತೆ

## ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

# ದೂರ ಶಿಕ್ಷಣ ವಿವರಣಾ ಕೈಪಿಡಿ

# 2026-27


ಒಂದು ವರ್ಷದ ಡಿಪ್ಲೊಮಾ (ಕೃಷಿ)
ಕೃಷಿಯಲ್ಲಿ ಬೀಜೋತ್ಪಾದನೆ ತಾಂತ್ರಿಕತೆಗಳು
ಕೃಷಿಯಲ್ಲಿ ಯಂತ್ರೋಪಕರಣಗಳ ನಿರ್ವಹಣೆ
ಜೇನು ಸಾಕಣೆ
ಸಮಗ್ರ ಕೃಷಿ


**ದೂರ ಶಿಕ್ಷಣ ಘಟಕ**
ವಿಸ್ತರಣಾ ನಿರ್ದೇಶನಾಲಯ
ಜಿಕೆವಿಕೆ, ಬೆಂಗಳೂರು – 560 065
Website: www.uasbangalore.edu.in
ದೂರವಾಣಿ ಸಂಖ್ಯೆ: 080–23636353

ನ್ಯಾಕ್ ಎ+ ಮಾನ್ಯತೆ

# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

# ದೂರ ಶಿಕ್ಷಣ ವಿವರಣಾ ಕೈಪಿಡಿ
## 2026-27



ಒಂದು ವರ್ಷದ ಡಿಪ್ಲೊಮಾ (ಕೃಷಿ)
ಕೃಷಿಯಲ್ಲಿ ಬೀಜೋತ್ಪಾದನೆ ತಾಂತ್ರಿಕತೆಗಳು
ಕೃಷಿಯಲ್ಲಿ ಯಂತ್ರೋಪಕರಣಗಳ ನಿರ್ವಹಣೆ
ಜೇನು ಸಾಕಣೆ
ಸಮಗ್ರ ಕೃಷಿ


**ದೂರ ಶಿಕ್ಷಣ ಘಟಕ**
ವಿಸ್ತರಣಾ ನಿರ್ದೇಶನಾಲಯ
ಜಿಕೆವಿಕೆ, ಬೆಂಗಳೂರು - 560 065
Website: www.uasbangalore.edu.in
ದೂರವಾಣಿ ಸಂಖ್ಯೆ: 080-23636353

# ಪರಿವಿಡಿ


| ಕ್ರಸಂ | ವಿಷಯ | ಪುಟ ಸಂಖ್ಯೆ |
|---|---|---|
| 1 | ಕೃಷಿ ವಿಶ್ವವಿದ್ಯಾನಿಲಯದ ಪರಿಚಯ | 1 |
| 2 | ಉದ್ದೇಶಗಳು | 2 |
| 3 | ವಿಶೇಷ ಲಕ್ಷಣಗಳು | 2 |
| 4 | ಕೋರ್ಸ್‌ಗಳ ವಿವರ | 3 |
| 5 | ಬೋಧನಾ ಮಾಧ್ಯಮ | 6 |
| 6 | ಅರ್ಹತೆ, ಅವಧಿ ಮತ್ತು ಶುಲ್ಕಗಳ ವಿವರ | 6 |
| 7 | ಬೋಧನಾ ವಿಧಾನ | 7 |
| 8 | ಸಂಪರ್ಕ ತರಗತಿ | 7 |
| 9 | ಸಮಾಲೋಚನಾ ಕಾರ್ಯಕ್ರಮ | 8 |
| 10 | ಮೌಲ್ಯಮಾಪನ | 9 |
| 11 | ತಾತ್ಕಾಲಿಕ ಶೈಕ್ಷಣಿಕ ಯೋಜನೆ | 9 |
| 12 | ಪ್ರವೇಶಾತಿ ಶುಲ್ಕದ ಮಾಹಿತಿ | 10 |
| 13 | ಫಲಿತಾಂಶ ಘೋಷಣೆ | 10 |
| 14 | ಅರ್ಜಿ ಪಡೆಯುವ ವಿಧಾನ | 10 |
| 15 | ಅರ್ಜಿ ವಿತರಣೆ ವಿವರ | 11 |
| 16 | ಅಭ್ಯರ್ಥಿಗಳಿಗೆ ಮುಖ್ಯ ಸೂಚನೆಗಳು | 13 |

# 1. ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು – ಪರಿಚಯ

ಕೃಷಿ ವಿಶ್ವವಿದ್ಯಾನಿಲಯವನ್ನು 1964 ರಲ್ಲಿ ಕೃಷಿ ಸಂಬಂಧಿತ ವಿಜ್ಞಾನ ಬೆಳವಣಿಗೆಗಾಗಿ ಸ್ಥಾಪಿಸಲಾಗಿದೆ. ಕೃಷಿ ವಿಶ್ವವಿದ್ಯಾನಿಲಯದ ಮುಖ್ಯ ಧ್ಯೇಯ ಕೃಷಿ ಮತ್ತು ಕೃಷಿ ಸಂಬಂಧಿತ ವಿಷಯಗಳಲ್ಲಿ ವಿಜ್ಞಾನ ಬೋಧನೆ, ಸಂಶೋಧನೆ ಹಾಗು ವಿಸ್ತರಣಾ ಸೇವೆಯಲ್ಲಿ ಅತ್ಯುನ್ನತ ಮಟ್ಟವನ್ನು ಮುಟ್ಟುವುದು. ಈ ವಿಶ್ವವಿದ್ಯಾನಿಲಯವು ಕೃಷಿ ಸಂಬಂಧಿತ ಕ್ಷೇತ್ರದಲ್ಲಿ ಹೊಸ ವಿಷಯಗಳು ಹಾಗೂ ಸಮಕಾಲೀನ ಅಭಿವೃದ್ಧಿಯ ಬಗ್ಗೆ ವೈಜ್ಞಾನಿಕ ಮತ್ತು ತಾಂತ್ರಿಕವಾಗಿ ಪ್ರಯತ್ನ ಮಾಡುತ್ತಿದೆ. ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, ದೇಶದ ಕೃಷಿ ಶಿಕ್ಷಣ ಮತ್ತು ಸಂಶೋಧನೆಯ ಪ್ರಮುಖ ಸಂಸ್ಥೆಯಾಗಿದೆ, ಪ್ರಸ್ತುತದಲ್ಲಿ ಕೃಷಿ ಸಂಬಂಧಿತ ವಿಶ್ವವಿದ್ಯಾಲಯಗಳಲ್ಲಿಯೇ 11ನೇ ಸ್ಥಾನದಲ್ಲಿದ್ದು, ದೇಶದ ಒಟ್ಟಾರೆ ವಿಶ್ವವಿದ್ಯಾಲಯ ವಿಭಾಗದಲ್ಲಿ ವಿಶ್ವವಿದ್ಯಾನಿಲಯವು 95ನೇ ಸ್ಥಾನದಲ್ಲಿದೆ ಮತ್ತು ರಾಜ್ಯ ಮಟ್ಟದಲ್ಲಿ ಪ್ರಥಮ ಸ್ಥಾನದಲ್ಲಿದೆ ಹಾಗೂ ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಮಂಡಳಿ (ನ್ಯಾಕ್ – NAAC) ಯಿಂದ 2024-25 ರಲ್ಲಿ ಐದು ವರ್ಷಗಳ ಅವಧಿಗೆ A+ ಗ್ರೇಡ್‌ನೊಂದಿಗೆ ಮಾನ್ಯತೆ ಪಡೆದಿದೆ.

ಕೃಷಿ ತಂತ್ರಜ್ಞಾನದ ಹೊಸ ಅವಿಷ್ಕಾರಗಳನ್ನು ದೂರ ಶಿಕ್ಷಣದ ಮೂಲಕ ರಾಜ್ಯದ ಕೃಷಿಕರಿಗೆ ಮುಟ್ಟಿಸುವ ಸಲುವಾಗಿ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಕೋರ್ಸ್‌ಗಳನ್ನು ಕೃಷಿ ವಿಶ್ವವಿದ್ಯಾನಿಲಯವು ಪ್ರಾರಂಭಿಸಿದೆ. ಈ ದೂರ ಶಿಕ್ಷಣ ಕಾರ್ಯಕ್ರಮವನ್ನು 1982ರಲ್ಲಿ ಕನ್ನಡ ಭಾಷೆಯಲ್ಲಿ ಭತ್ತ ಮತ್ತು ರೇಷ್ಮೆ ಕೃಷಿಯ ಎರಡು ವಿಷಯಗಳಲ್ಲಿ ಪ್ರಾರಂಭಿಸಿತು, ತದನಂತರ 2010ರಲ್ಲಿ ಪ್ರತ್ಯೇಕ ದೂರ ಶಿಕ್ಷಣ ವಿಭಾಗವಾಗಿ ಕೃಷಿ ವಿಶ್ವವಿದ್ಯಾನಿಲಯವು ಪ್ರಾರಂಭಿಸಲಾಯಿತು, 2011ರಲ್ಲಿ ಸರ್ಟಿಫಿಕೇಟ್ ಕೋರ್ಸ್‌ಗಳಾದ ಸಮಗ್ರ ಕೃಷಿ ಮತ್ತು ಆಹಾರ ಧಾನ್ಯ, ಹಣ್ಣು ಮತ್ತು ತರಕಾರಿಗಳ ಕೊಯ್ಲೋತ್ತರ ನಿರ್ವಹಣೆ ಕೋರ್ಸ್‌ಗಳನ್ನು ತೆರೆಯಲಾಯಿತು. 2012ರಲ್ಲಿ ದೂರ ಶಿಕ್ಷಣ ವಿಭಾಗವನ್ನು ವಿಸ್ತರಣಾ ನಿರ್ದೇಶನಾಲಯಕ್ಕೆ ವರ್ಗಾಯಿಸಿ ದೂರ ಶಿಕ್ಷಣ ಘಟಕವೆಂದು ಹೆಸರಿಡಲಾಯಿತು. 2014ರಲ್ಲಿ ಡಿಪ್ಲೊಮಾ ಕೋರ್ಸ್‌ಗಳಾದ ಒಂದು ವರ್ಷದ ಡಿಪ್ಲೊಮಾ (ಕೃಷಿ) (ಕನ್ನಡ) ಮತ್ತು ಒಂದು ವರ್ಷದ ಸ್ನಾತಕೋತ್ತರ ಕೃಷಿ ಡಿಪ್ಲೊಮಾ (English) ಕೋರ್ಸ್‌ಗಳನ್ನು ಪ್ರಾರಂಭಿಸಲಾಯಿತು. 2020-21ನೇ ಶೈಕ್ಷಣಿಕ ಸಾಲಿನಲ್ಲಿ ಜೇನುಸಾಕಣೆ ಸರ್ಟಿಫಿಕೇಟ್ ಕೋರ್ಸ್‌ನ್ನು ಪ್ರಾರಂಭಿಸಲಾಯಿತು, 2022-23ನೇ ಶೈಕ್ಷಣಿಕ ಸಾಲಿನಲ್ಲಿ ಎರಡು ನೂತನ ಸರ್ಟಿಫಿಕೇಟ್ ಕೋರ್ಸ್‌ಗಳಾದ ಕೃಷಿಯಲ್ಲಿ ಬೀಜೋತ್ಪಾದನೆ ತಾಂತ್ರಿಕತೆಗಳು ಮತ್ತು ಕೃಷಿಯಲ್ಲಿ ಯಂತ್ರೋಪಕರಣಗಳ ನಿರ್ವಹಣೆ ಕೋರ್ಸ್‌ಗಳನ್ನು ಆರಂಭಿಸಲಾಗಿದೆ. ಪ್ರಸ್ತುತ ಎರಡು ವಿಷಯಗಳಲ್ಲಿ ಡಿಪ್ಲೊಮಾ ಕೋರ್ಸ್‌ಗಳನ್ನು ಮತ್ತು ಐದು ವಿಷಯಗಳಲ್ಲಿ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ.

## 2. ಉದ್ದೇಶಗಳು

1. ಕೃಷಿ ತಾಂತ್ರಿಕತೆಗಳನ್ನು ರೈತರಿಗೆ (ಗ್ರಾಮೀಣ ಯುವ ಜನಾಂಗಕ್ಕೆ ಮತ್ತು ಇತರೆ ಆಸಕ್ತರಿಗೆ) ದೂರ ಶಿಕ್ಷಣದ ಮೂಲಕ ತಲುಪಿಸುವುದು
2. ಗ್ರಾಮೀಣ ಪ್ರದೇಶಗಳಲ್ಲಿ ವಿಶೇಷವಾಗಿ ಶಾಲಾ/ಕಾಲೇಜು ವ್ಯಾಸಂಗ ವಂಚಿತರಾದವರಲ್ಲಿ ಕೃಷಿಯ ಬಗ್ಗೆ ಮಾನವ ಸಂಪನ್ಮೂಲ ಅಭಿವೃದ್ಧಿಪಡಿಸುವುದು
3. ಶಿಕ್ಷಣವನ್ನು ಪೂರೈಸದೇ ಅರ್ಧದಲ್ಲಿ ಬಿಟ್ಟಿರುವ ಕಲಿಕಾರ್ಥಿಗಳಿಗೆ ಕೃಷಿ ಶಿಕ್ಷಣ ಮುಂದುವರೆಸಲು ಅವಕಾಶಗಳನ್ನು ಒದಗಿಸುವುದು
4. ಕಾರ್ಯನಿರತ ಉದ್ಯೋಗಿಗಳಿಗೆ ಉನ್ನತ ಕೃಷಿ ಜ್ಞಾನವನ್ನು ವೃದ್ಧಿಸಿಕೊಳ್ಳಲು ಅವಕಾಶವನ್ನು ಒದಗಿಸುವುದು ಮತ್ತು
5. ಕೃಷಿಯಲ್ಲಿ ದೂರ ಶಿಕ್ಷಣಕ್ಕೆ ಉತ್ತೇಜನ ನೀಡುವುದು

## 3. ವಿಶೇಷ ಲಕ್ಷಣಗಳು

ಮುಕ್ತ ಮತ್ತು ದೂರ ಶಿಕ್ಷಣ ಕಲಿಕಾ ವ್ಯವಸ್ಥೆಯು ಅದ್ವಿತೀಯವು ಹಾಗೂ ಸವಾಲುವುಳ್ಳದ್ದು ಆಗಿದೆ. ಏಕೆಂದರೆ ಮುಕ್ತ ಮತ್ತು ದೂರ ಕಲಿಕಾ ಕ್ರಮಕ್ಕೆ ಸೇರ್ಪಡೆಯಾಗಿರುವ ಕಲಿಕಾರ್ಥಿಗಳು ವಿವಿಧ ಬಗೆಯ ಸಾಮಾಜಿಕ, ಆರ್ಥಿಕ ಹಿನ್ನಲೆಯೊಂದಿಗೆ ಹಾಗೂ ವಿಭಿನ್ನ ಕಲಿಕಾ ಹಿನ್ನಲೆಯನ್ನು ಹೊಂದಿರುವವರಾಗಿರುತ್ತಾರೆ. ಪ್ರಸ್ತುತ ಸಾಂಪ್ರದಾಯಿಕ ವಿಶ್ವವಿದ್ಯಾನಿಲಯ ವ್ಯವಸ್ಥೆಗೆ ಅಭ್ಯರ್ಥಿಗಳ ನೈಜ ಬೇಡಿಕೆಗಳನ್ನು ಪೂರೈಸಲು ಸಾಧ್ಯವಾಗುತ್ತಿಲ್ಲ ಹಾಗೂ ಇಂತಹ ಅಭ್ಯರ್ಥಿಗಳು ಹಲವಾರು ಕಾರಣಗಳಿಂದ ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಣ ಮುಂದುವರೆಸಲು ಸಾಧ್ಯವಾಗುತ್ತಿಲ್ಲ ಹೀಗಾಗಿ ಸಾಂಪ್ರದಾಯಿಕ ಶಿಕ್ಷಣದಿಂದ ವಂಚಿತರಾಗಿರುವ ಅಭ್ಯರ್ಥಿಗಳಿಗೆ ಶಿಕ್ಷಣವನ್ನು ಮುಂದುವರೆಸಲು ದೂರ ಶಿಕ್ಷಣ ವ್ಯವಸ್ಥೆಯಲ್ಲಿ ಅವಕಾಶ ಒದಗಿಸಲಾಗಿದೆ. ಕೃಷಿ ವಿಶ್ವವಿದ್ಯಾನಿಲಯದ ಪ್ರಮುಖ ಧ್ಯೇಯವೆಂದರೆ ಉನ್ನತ ಗುಣಮಟ್ಟದ ಮಾನವ ಸಂಪನ್ಮೂಲವನ್ನು ಸೃಜಿಸುವುದೇ ಆಗಿದೆ. ಹೀಗಾಗಿ ಈ ಕೆಳಕಂಡ ಅಂಶಗಳಿಗೆ ಒತ್ತು ನೀಡಿ ಶಿಕ್ಷಣ ನೀಡಲಾಗುತ್ತಿದೆ.

- ಅನುಕೂಲಕರ ರೀತಿಯಲ್ಲಿ ಸ್ವತಃ ವ್ಯಾಸಂಗ ಮಾಡುವುದು
- ತಾವೇ ಅಧ್ಯಯನ ಕೇಂದ್ರ ಆಯ್ಕೆ ಮಾಡುವ ಅವಕಾಶ
- ನವ್ಯ ಪಠ್ಯ ಮಾದರಿ
- ಮುದ್ರಿತ ಮಾರ್ಗದರ್ಶಿ ಒದಗಿಸುವುದು
- ಅಭ್ಯರ್ಥಿಗಳು ವಾಸಿಸುವ ಸ್ಥಳದಲ್ಲೇ ಕೃಷಿ ಶಿಕ್ಷಣವನ್ನು ಪಡೆಯಲು ಅವಕಾಶ ಒದಗಿಸುವುದು

# 4. ಕೋರ್ಸ್‌ಗಳ ವಿವರ

## ಡಿಪ್ಲೊಮಾ ಕೋರ್ಸ್

1. ಒಂದು ವರ್ಷದ ಡಿಪ್ಲೊಮಾ (ಕೃಷಿ)

## ಸರ್ಟಿಫಿಕೇಟ್ ಕೋರ್ಸ್‌ಗಳು

1. ಕೃಷಿಯಲ್ಲಿ ಬೀಜೋತ್ಪಾದನೆ ತಾಂತ್ರಿಕತೆಗಳು
2. ಕೃಷಿಯಲ್ಲಿ ಯಂತ್ರೋಪಕರಣಗಳ ನಿರ್ವಹಣೆ
3. ಜೇನು ಸಾಕಣೆ
4. ಸಮಗ್ರ ಕೃಷಿ

## ಅ. ಒಂದು ವರ್ಷದ ಡಿಪ್ಲೊಮಾ (ಕೃಷಿ)

### ಒಂದು ವರ್ಷದ ಡಿಪ್ಲೊಮಾ ಕೋರ್ಸ್‌ನಲ್ಲಿ ಕಲಿಸಲಾಗುವ ವಿಷಯಗಳು

ಕೃಷಿ ಪರಿಚಯ ಮತ್ತು ಬೇಸಾಯ ಶಾಸ್ತ್ರದ ತತ್ವಗಳು, ತಳಿಗಳು ಮತ್ತು ಬೀಜೋತ್ಪಾದನೆ ತಾಂತ್ರಿಕತೆಗಳು. ಆಹಾರ, ವಾಣಿಜ್ಯ ಮತ್ತು ತೋಟಗಾರಿಕೆ ಬೆಳೆಗಳ ಉತ್ಪಾದನಾ ತಾಂತ್ರಿಕತೆಗಳು, ಮಣ್ಣಿನ ಫಲವತ್ತತೆ ಮತ್ತು ಪೋಷಕಾಂಶಗಳ ನಿರ್ವಹಣೆ, ಮಣ್ಣು ಮತ್ತು ನೀರಿನ ಸಂರಕ್ಷಣೆ ಹಾಗೂ ನಿರ್ವಹಣೆ ತಾಂತ್ರಿಕತೆಗಳು, ಬೆಳೆಗಳಿಗೆ ತಗಲುವ ಕೀಟ ಮತ್ತು ರೋಗಗಳ ಸಮಗ್ರ ನಿರ್ವಹಣೆ, ಕೃಷಿ ಶಕ್ತಿ ಸಂಪನ್ಮೂಲಗಳು, ಕೃಷಿಯಲ್ಲಿ ಯಾಂತ್ರೀಕರಣ, ಕೊಯ್ಲೋತ್ತರ ಸುಧಾರಣಾ ತಾಂತ್ರಿಕತೆಗಳು ಮತ್ತು ಮೌಲ್ಯವರ್ಧನೆ, ಕೃಷಿ ಅರ್ಥಶಾಸ್ತ್ರ ಮತ್ತು ಮಾರುಕಟ್ಟೆ, ಕೃಷಿ ವಿಸ್ತರಣೆ ಮತ್ತು ಗ್ರಾಮೀಣಾಭಿವೃದ್ಧಿ. ಈ ಎಲ್ಲಾ ವಿಷಯಗಳನ್ನೊಳಗೊಂಡ ಮುದ್ರಿತ ಮಾರ್ಗದರ್ಶಿಯನ್ನು ತಯಾರಿಸಿ ಅಭ್ಯರ್ಥಿಗಳಿಗೆ ಒದಗಿಸಲಾಗುವುದು.

### ಡಿಪ್ಲೊಮಾ ಪೂರ್ಣಗೊಳಿಸಲು ಗರಿಷ್ಠ ಅವಧಿ

ಕಲಿಕಾರ್ಥಿಯು ಡಿಪ್ಲೊಮಾ ಕೋರ್ಸ್‌ನ್ನು ವಿಶ್ವವಿದ್ಯಾನಿಲಯವು ನಿಗದಿ ಪಡಿಸಿದ ಒಂದು ವರ್ಷದ ಅವಧಿಯಲ್ಲಿ ಪೂರ್ಣಗೊಳಿಸಬೇಕು. ಆದಾಗ್ಯೂ ಒಬ್ಬ ಅಭ್ಯರ್ಥಿ ಕಾರಣಾಂತರಗಳಿಂದ ಕನಿಷ್ಟ ಅವಧಿಯಲ್ಲಿ ಪೂರ್ಣಗೊಳಿಸಲು ಸಾಧ್ಯವಾಗದಿದ್ದಲ್ಲಿ ಅಂತಹವರಿಗೆ ನಿಗದಿತ ಅವಧಿಗಿಂತ ಒಂದು ವರ್ಷ ಹೆಚ್ಚಿನ ಸಮಯಾವಕಾಶವನ್ನು ನೀಡಲಾಗುವುದು. ಇದರ ಸಾಮಾನ್ಯ ಸಮೀಕರಣವೆಂದರೆ N+1

ವರ್ಷಗಳು (N=ಶಿಕ್ಷಣ ಕ್ರಮವನ್ನು ಪೂರ್ಣಗೊಳಿಸಲು ನೀಡಿರುವ ಕನಿಷ್ಠ / ಸಾಮಾನ್ಯ ಅವಧಿ) ಈ ಸೂತ್ರವನ್ನು ಕಾಲಕಾಲಕ್ಕೆ ನಿಯಮಗಳಂತೆ ಪರಿಷ್ಕರಣೆಗೊಳ್ಳುತ್ತದೆ.

**ಅಧ್ಯಯನ ಕೇಂದ್ರಗಳು**

ಅಭ್ಯರ್ಥಿಗಳು ಎಷ್ಟು ಸಂಖ್ಯೆಯಲ್ಲಿ ದಾಖಲಾತಿ ಹೊಂದಿದ್ದಾರೆ ಎಂಬುದರ ಆಧಾರದ ಮೇಲೆ ವಿಶ್ವವಿದ್ಯಾನಿಲಯವು ಅಧ್ಯಯನ ಕೇಂದ್ರವನ್ನು ಗುರುತಿಸುತ್ತದೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಕೃಷಿ ವಿಜ್ಞಾನ ಕೇಂದ್ರಗಳು ಹಾಗೂ ಇತರೆ ಅಂಗ ಸಂಸ್ಥೆಗಳು ಅಧ್ಯಯನ ಕೇಂದ್ರಗಳಾಗಿ ಕಾರ್ಯ ನಿರ್ವಹಿಸುತ್ತವೆ. **ಅಧ್ಯಯನ ಕೇಂದ್ರದಲ್ಲಿ ಅಭ್ಯರ್ಥಿಗಳ ಸಂಖ್ಯೆಯನ್ನು ನಿರ್ಧರಿಸುವ ಅಧಿಕಾರ ಕೃಷಿ ವಿಶ್ವವಿದ್ಯಾನಿಲಯಕ್ಕೆ ಸೇರಿದ್ದು.**

## ಅಧ್ಯಯನ ಕೇಂದ್ರಗಳ ವಿವರ

| ಕ್ರಮ ಸಂಖ್ಯೆ | ಅಧ್ಯಯನ ಕೇಂದ್ರಗಳು / ಕೃಷಿ ವಿಜ್ಞಾನ ಕೇಂದ್ರಗಳು | ಮೊಬೈಲ್ ನಂ. |
|---|---|---|
| 1 | ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು<br>ತುಮಕೂರು – 572 202 | 9449866936 |
| 2 | ಕೃಷಿ ವಿಜ್ಞಾನ ಕೇಂದ್ರ, ಎ.ಆರ್.ಎಸ್., ಕುರುಬೂರು ಫಾರಂ<br>ಚಿಂತಾಮಣಿ – 563 125 | 9449866930 |
| 3 | ಕೃಷಿ ವಿಜ್ಞಾನ ಕೇಂದ್ರ, ಹಾಡೋನಹಳ್ಳಿ<br>ದೊಡ್ಡಬಳ್ಳಾಪುರ – 561 205 | 9449866928 |
| 4 | ಕೃಷಿ ವಿಜ್ಞಾನ ಕೇಂದ್ರ, ಚಂದುರಾಯನಹಳ್ಳಿ<br>ಮಾಗಡಿ ತಾಲ್ಲೂಕು – 562 120 | 9449866918<br>080–29899388 |
| 5 | ರೈತ ತರಬೇತಿ ಸಂಸ್ಥೆ, ಕೃ.ವಿ.ವಿ., ಜಿ.ಕೆ.ವಿ.ಕೆ.<br>ಬೆಂಗಳೂರು – 560 065 | 080–23626455 |

## ಸರ್ಟಿಫಿಕೇಟ್ ಕೋರ್ಸ್‌ಗಳು

### ಅ. ಕೃಷಿಯಲ್ಲಿ ಬೀಜೋತ್ಪಾದನೆ ತಾಂತ್ರಿಕತೆಗಳು

ಕೃಷಿಯಲ್ಲಿ ಬೀಜೋತ್ಪಾದನೆ ತಾಂತ್ರಿಕತೆಗಳು ವಿಷಯಗಳು ಸಾಕಷ್ಟು ಪ್ರಮಾಣದಲ್ಲಿ ಪ್ರಚಾರಗೊಳ್ಳುತ್ತಿದ್ದು ಹಾಗೂ ಗ್ರಾಮಗಳಲ್ಲಿ ಬೇಡಿಕೆ ಹೆಚ್ಚಾಗುತ್ತಿದೆ. ಈ ನಿಟ್ಟಿನಲ್ಲಿ ಹೆಚ್ಚಿನ ಜನರಿಗೆ ಸರ್ಟಿಫಿಕೇಟ್ ಕೋರ್ಸ್ ಮುಖಾಂತರ ತಾಂತ್ರಿಕ ಮಾಹಿತಿ ದೊರೆತಾಗ ಅವರು ಸ್ವಯಂ ಉದ್ಯೋಗಸ್ಥರಾಗಲು ಸಹಾಯವಾಗುತ್ತದೆ. ಈ ಅವಕಾಶಗಳನ್ನು ರೈತರು ಸದುಪಯೋಗ ಪಡೆದುಕೊಳ್ಳಲು ಸರ್ಟಿಫಿಕೇಟ್ ಕೋರ್ಸ್ ಒಂದು ಸೂಕ್ತ ಮಾರ್ಗದರ್ಶನವಾಗಲಿದೆ. ಈ ಕೋರ್ಸ್‌ನಲ್ಲಿ ಬೀಜ, ತಳಿವರ್ಗಗಳು ಮತ್ತು ಅಭಿವೃದ್ಧಿ, ಬೀಜೋತ್ಪಾದನಾ ತತ್ವಗಳು, ರಾಗಿಯಲ್ಲಿ ಬೀಜೋತ್ಪಾದನಾ ಕ್ರಮಗಳು, ಸಂಕರಣ ಬೀಜೋತ್ಪಾದನೆ ಭತ್ತ ಮತ್ತು ಮೆಕ್ಕೆಜೋಳ, ತೊಗರಿ ಮತ್ತು ಅವರೆ ಬೀಜೋತ್ಪಾದನಾ ತಾಂತ್ರಿಕತೆ, ಸೂರ್ಯಕಾಂತಿ ಮತ್ತು ಕಡಲೆಕಾಯಿ ಬೀಜೋತ್ಪಾದನೆ, ಹತ್ತಿ ಮತ್ತು ವಿವಿಧ ಬೆಳೆಗಳ ಬೀಜೋತ್ಪಾದನೆ. ಬೀಜ ಸಂಸ್ಕರಣೆ, ಪ್ರಮಾಣೀಕರಣ, ಸಂಗ್ರಹಣೆ ಮತ್ತು ಬೀಜ ಪರೀಕ್ಷೆ, ಸಸ್ಯ ತಳಿ ರಕ್ಷಣೆ, ಹೊಸ ಬೀಜ ಕಾರ್ಯ ನೀತಿ ನಿಬಂಧನೆ 2000, ಬೀಜ್‌ಆಧಾರ್– ಮೊಬೈಲ್‌ಆ್ಯಪ್– ಗುಣಮಟ್ಟದ ಬೀಜಕ್ಕಾಗಿ ಮತ್ತು ಬೀಜ ಕಾಯ್ದೆ 1966, ಬೀಜ ನಿಯಮಾವಳಿ 1968.

### ಆ. ಕೃಷಿಯಲ್ಲಿ ಯಂತ್ರೋಪಕರಣಗಳ ನಿರ್ವಹಣೆ

ಕೃಷಿಯಲ್ಲಿ ಯಂತ್ರೋಪಕರಣಗಳ ನಿರ್ವಹಣೆ ವಿಷಯಗಳು ಸಾಕಷ್ಟು ಪ್ರಮಾಣದಲ್ಲಿ ಪ್ರಚಾರಗೊಳ್ಳುತ್ತಿದ್ದು ಗ್ರಾಮಗಳಲ್ಲಿ ಬೇಡಿಕೆ ಹೆಚ್ಚಾಗುತ್ತಿದೆ. ಈ ನಿಟ್ಟಿನಲ್ಲಿ ಹೆಚ್ಚಿನ ಜನರಿಗೆ ಸರ್ಟಿಫಿಕೇಟ್ ಕೋರ್ಸ್ ಮುಖಾಂತರ ತಾಂತ್ರಿಕ ಮಾಹಿತಿ ದೊರೆತಾಗ ಅವರು ಸ್ವಯಂ ಉದ್ಯೋಗಸ್ಥರಾಗಲು ಸಹಾಯವಾಗುತ್ತದೆ. ಈ ಅವಕಾಶಗಳನ್ನು ರೈತರು ಸದುಪಯೋಗ ಪಡೆದುಕೊಳ್ಳಲು ಸರ್ಟಿಫಿಕೇಟ್ ಕೋರ್ಸ್ ಒಂದು ಸೂಕ್ತ ಮಾರ್ಗದರ್ಶನವಾಗಲಿದೆ. ಈ ಕೋರ್ಸ್‌ನಲ್ಲಿ ಕೃಷಿ ಯಾಂತ್ರೀಕರಣ ಪರಿಚಯ ಮತ್ತು ಕೃಷಿ ಶಕ್ತಿಯ ಮೂಲಗಳು, ಇಂಜಿನ್, ಟ್ರ್ಯಾಕ್ಟರ್ ಮತ್ತು ಪವರ್ ಟಿಲ್ಲರ್ ನಿರ್ವಹಣೆ, ಭೂಮಿಯನ್ನು ಹದ ಮಾಡುವ ಉಪಕರಣಗಳು, ಬಿತ್ತನೆ ಉಪಕರಣಗಳು, ಕಳೆ ತೆಗೆಯುವ ಹಾಗೂ ಅಂತರ ಬೇಸಾಯದ ಉಪಕರಣಗಳು, ಸಸ್ಯ ಸಂರಕ್ಷಣಾ ಉಪಕರಣಗಳು, ಕೊಯ್ಲು ಮಾಡುವ ಯಂತ್ರ/ ಬೆಳೆ ಕಟಾವು ಯಂತ್ರಗಳು, ಒಕ್ಕಣೆ ಮಾಡುವ ಯಂತ್ರಗಳು, ಇತರೆ ಉಪಕರಣಗಳು – ಚಾಫ್ ಕಟ್ಟರ್ ಆಗರ್ ಡಿಗ್ಗರ್, ನೀರಾವರಿ ಪಂಪುಗಳು ಮತ್ತು ಎಲೆಕ್ಟ್ರಿಕ್ ಮೋಟಾರ್‌ಗಳು, ಹಸಿರುಮನೆ ಮತ್ತು ಹನಿ ನೀರಾವರಿ ವ್ಯವಸ್ಥೆಯ ನಿರ್ವಹಣೆ ಮತ್ತು ಯಂತ್ರೋಪಕರಣಗಳ ಪಟ್ಟಿ ಇತ್ಯಾದಿ ವಿಷಯಗಳ ಬಗ್ಗೆ ಮಾಹಿತಿ ನೀಡಲಾಗುತ್ತದೆ.

### ಇ. ಜೇನು ಸಾಕಣೆ

ಈ ಕೋರ್ಸ್‌ನಲ್ಲಿ ಕಲಿಯುವ ವಿಷಯಗಳು: ಜೇನುಸಾಕಣೆಯ ಪ್ರಾಮುಖ್ಯತೆ, ಜೇನು ನೊಣಗಳ ಪ್ರಭೇದಗಳು, ಪ್ರಾರಂಭಿಕ ಜೇನು ಸಾಕಣೆ, ಜೇನು ಸಾಕಣೆಯ ಉಪಕರಣಗಳು, ಜೇನುನೊಣಗಳ ಆಹಾರ ಸಸ್ಯಗಳು ಹಾಗೂ ಜೇನು ಕುಟುಂಬಗಳ ನಿರ್ವಹಣೆ, ಸ್ವಾಭಾವಿಕ ಶತ್ರುಗಳು, ರೋಗಗಳು, ಜೇನುನೊಣಗಳ ವಿಷಕಾರತ್ವ, ವಿವಿಧ ಬೆಳೆಗಳಲ್ಲಿ ಪರಾಗಸ್ಪರ್ಶ ಕ್ರೀಯೆ, ಜೇನುನೊಣಗಳ ಉತ್ಪನ್ನಗಳು, ಸ್ಥಳಾಂತರ ಜೇನುಕೃಷಿ ಮತ್ತು ಜೇನುಕೃಷಿಯ ಲಾಭದ ಲೆಕ್ಕಚಾರ, ಮುಂತಾದ ವಿಷಯಗಳನ್ನು ಕಲಿಸಲಾಗುವುದು.

**ಈ. ಸಮಗ್ರ ಕೃಷಿ**

ಸಮಗ್ರ ಕೃಷಿ ಒಂದು ಸುಸ್ಥಿರ ಕೃಷಿ ಪದ್ಧತಿ. ಇದು ರೈತರಿಗೆ ವಿವಿಧ ಕೃಷಿ ಪದ್ಧತಿಗಳನ್ನು ಅನುಸರಿಸುವಂತೆ ಅನುವು ಮಾಡಿಕೊಡುತ್ತದೆ ಮತ್ತು ಉತ್ಪಾದಕತೆ ಹೆಚ್ಚಿಸುವಲ್ಲಿ ಸಹಾಯ ಮಾಡುತ್ತದೆ. ಈ ವಿಷಯದ ಅಧ್ಯಯನದಲ್ಲಿ ಬೆಳೆ ಪದ್ಧತಿಗಳು, ವಿವಿಧ ಸಮಗ್ರ ಕೃಷಿ ಪದ್ಧತಿಗಳ ಮಾದರಿಗಳು ಲಾಭ/ನಷ್ಟ ಅನುಪಾತ, ಕೃಷಿ ಉದ್ಯಮಗಳು, ಉಪಯೋಗಗಳು ಮತ್ತು ನ್ಯೂನತೆಗಳ ಬಗ್ಗೆ ವಿಷಯಗಳನ್ನು ಒಳಗೊಂಡಿರುತ್ತದೆ. ಈ ಕಾರಣಕ್ಕಾಗಿಯೇ ಕೃಷಿ ವಿಶ್ವವಿದ್ಯಾನಿಲಯ ಹಾಗು ಕೃಷಿ ಇಲಾಖೆ ಸಮಗ್ರ ಕೃಷಿ ಪದ್ಧತಿಯನ್ನು ಹೆಚ್ಚು ಪ್ರಚಾರಗೊಳಿಸುತ್ತಿವೆ.

## 5. ಬೋಧನೆಯ ಮಾಧ್ಯಮ: ಕನ್ನಡ

## 6. ಅರ್ಹತೆ, ಅವಧಿ, ಮತ್ತು ಶುಲ್ಕಗಳ ವಿವರ

ವಿಶ್ವವಿದ್ಯಾನಿಲಯವು ವಿವಿಧ ಶಿಕ್ಷಣ ಕ್ರಮಗಳಿಗೆ ಶುಲ್ಕವನ್ನು ನಿಗದಿಪಡಿಸಿದೆ.

| ಕ್ರಮ ಸಂಖ್ಯೆ | ಕೋರ್ಸ್‌ಗಳ ವಿವರ | ಅರ್ಹತೆ | ಅವಧಿ | ಶುಲ್ಕ (ರೂ. ಗಳಲ್ಲಿ) |
|---|---|---|---|---|
| **ಡಿಪ್ಲೊಮಾ ಕೋರ್ಸ್** | | | | |
| 1 | ಒಂದು ವರ್ಷದ ಡಿಪ್ಲೊಮಾ (ಕೃಷಿ) | 10ನೇ ತರಗತಿ ಪಾಸಾಗಿರಬೇಕು | 12 ತಿಂಗಳು | 10000=00 |
| **ಸರ್ಟಿಫಿಕೇಟ್ ಕೋರ್ಸ್‌ಗಳು** | | | | |
| 1 | ಕೃಷಿಯಲ್ಲಿ ಬೀಜೋತ್ಪಾದನೆ ತಾಂತ್ರಿಕತೆಗಳು | 10ನೇ ತರಗತಿ ಪಾಸಾಗಿರಬೇಕು | 12 ತಿಂಗಳು | 3000=00 |
| 2 | ಕೃಷಿಯಲ್ಲಿ ಯಂತ್ರೋಪಕರಣಗಳ ನಿರ್ವಹಣೆ | 10ನೇ ತರಗತಿ 6 ಪಾಸಾಗಿರಬೇಕು | 12 ತಿಂಗಳು | 3000=00 |
| 3 | ಜೇನು ಸಾಕಣೆ | 7ನೇ ತರಗತಿ ಪಾಸಾಗಿರಬೇಕು | 12 ತಿಂಗಳು | 3000=00 |
| 4 | ಸಮಗ್ರ ಕೃಷಿ | 7ನೇ ತರಗತಿ ಪಾಸಾಗಿರಬೇಕು | 12 ತಿಂಗಳು | 1500=00 |

ಕೃಷಿ ವಿಶ್ವವಿದ್ಯಾನಿಲಯವು ತನ್ನ ಶಿಕ್ಷಣ ಕ್ರಮಗಳಿಗೆ ಶ್ರೇಯಾಂಕ ಪದ್ಧತಿಯನ್ನು ಅನುಸರಿಸುತ್ತಿದೆ. ಪ್ರತಿ ಶ್ರೇಯಾಂಕವು 36 ಗಂಟೆಗಳ ಅಧ್ಯಯನ ಅವಧಿಯನ್ನು ಹೊಂದಿದ್ದು, ಇದರಲ್ಲಿ ಕಲಿಕಾ ಚಟುವಟಿಕೆಗಳು ಅಂದರೆ ಸ್ವಕಲಿಕಾ ಸಾಮಾಗ್ರಿಯನ್ನು ಅಧ್ಯಯನ ಮಾಡುವುದು ಮತ್ತು ಸಂಪರ್ಕ ಕಾರ್ಯಕ್ರಮಗಳಿಗೆ ಹಾಜರಾಗುವುದು.

# 7. ಬೋಧನಾ ವಿಧಾನ

ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳಲ್ಲಿ ಇರುವುದಕ್ಕಿಂತ ಭಿನ್ನವಾದ ಬೋಧನಾ ವಿಧಾನ ನಮ್ಮ ವಿಶ್ವವಿದ್ಯಾನಿಲಯದಲ್ಲಿದೆ. ಈ ಬೋಧನಾ ವ್ಯವಸ್ಥೆ ಅತ್ಯಂತ ಕಲಿಕಾರ್ಥಿ ಆಧಾರಿತವಾಗಿದ್ದು, ಅಭ್ಯರ್ಥಿಯು ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಕ್ರಿಯಾತ್ಮಕವಾಗಿ ಪಾಲ್ಗೊಳ್ಳಲು ಅಗತ್ಯ ಪ್ರೇರಣೆಯನ್ನು ಒದಗಿಸುತ್ತದೆ. ಅಭ್ಯರ್ಥಿಗಳಿಗೆ ಬೋಧನೆಯನ್ನು ವಿವಿಧ ಕ್ರಮಗಳ ಮುಖಾಂತರ ನೀಡಲಾಗುತ್ತದೆ. ಅವುಗಳೆಂದರೆ ಮುದ್ರಿತ ಸಾಮಾಗ್ರಿ, ಸಮಾಲೋಚನೆ ಕಾರ್ಯದಲ್ಲಿ ಮುಖಾಮುಖಿ ಸಂವಹನ ನಡೆಸಲಾಗುತ್ತದೆ.

ಬೋಧನಾ ಮಾಧ್ಯಮವು ಈ ಕೆಳಕಂಡ ಕ್ರಮಗಳ ಸಮ್ಮಿಳಿತವಾಗಿದೆ.

- ಮುದ್ರಿತ ಸ್ವಯಂ ಕಲಿಕಾ ಸಾಮಾಗ್ರಿ
- ಕಲಿಕಾರ್ಥಿ ಅಧ್ಯಯನ ಕೇಂದ್ರಗಳಲ್ಲಿ ವಿಷಯ ತಜ್ಞರೊಂದಿಗೆ ಮುಖಾಮುಖಿ ಕಾರ್ಯಕ್ರಮ

ಅಧ್ಯಯನ ಸಾಮಾಗ್ರಿಯನ್ನು ವಿವಿಧ ಬ್ಲಾಕ್‌ಗಳಾಗಿ ವಿಭಾಗಿಸಲಾಗಿದೆ. ಅಧ್ಯಯನ ಸಾಮಾಗ್ರಿಯನ್ನು ಕಲಿಕಾರ್ಥಿಯ ಹಿನ್ನಲೆ, ಅಧ್ಯಯನ ಮಟ್ಟ ಇವುಗಳನ್ನು ಆಧರಿಸಿ ರಚಿಸಲಾಗಿದೆ. ವಿವಿಧ ಶಿಕ್ಷಣ ಕ್ರಮದ ಅಗತ್ಯತೆಯನ್ನು ಪೂರೈಸಿಕೊಳ್ಳಲು ಅಧ್ಯಯನ ಸಾಮಾಗ್ರಿ ಪ್ರಾಥಮಿಕ ಮೂಲದ ಮಾಹಿತಿಯಾಗಿದೆ. ಅಧ್ಯಯನ ಸಾಮಾಗ್ರಿಯನ್ನು ಪ್ರವೇಶಾತಿ ಸಂದರ್ಭದಲ್ಲಿ ನೀಡಲಾಗುವುದು.

ವೈಯಕ್ತಿಕವಾಗಿ ಅಧ್ಯಯನ ಸಾಮಾಗ್ರಿಯನ್ನು ಪಡೆಯದಿದ್ದ ಅಭ್ಯರ್ಥಿಗಳಿಗೆ ಅಧ್ಯಯನ ಸಾಮಾಗ್ರಿಯನ್ನು ರವಾನಿಸಲಾಗುವುದು. ಅಧ್ಯಯನ ಸಾಮಾಗ್ರಿ ಅಭ್ಯರ್ಥಿಗೆ ತಲುಪದೆ/ಅಭ್ಯರ್ಥಿ ಸ್ವೀಕರಿಸದೆ ಹಿಂದಕ್ಕೆ ಬಂದರೆ ನಂತರ ಅಭ್ಯರ್ಥಿಗಳಿಗೆ ವಿತರಿಸಲಾಗುವುದು.

ವಿಶ್ವವಿದ್ಯಾನಿಲಯವು ಅಭ್ಯರ್ಥಿಗಳು ಸ್ವಯಂ ಕಲಿಕಾ ಸಾಮಾಗ್ರಿಯನ್ನು ಮೌಲ್ಯಮಾಪನ ಮಾಡುವ ವ್ಯವಸ್ಥೆಯನ್ನು ಪರಿಚಯಿಸಿದೆ. ಈ ಉದ್ದೇಶಕ್ಕಾಗಿ ಸ್ವಯಂ ಕಲಿಕಾ ಸಾಮಾಗ್ರಿಯೊಂದಿಗೆ ಹಿನ್ನುಣಿಕೆ (ಫೀಡ್‌ಬ್ಯಾಕ್) ನಮೂನೆಯನ್ನು ಕಳುಹಿಸಿಕೊಡಲಾಗುವುದು. ಪ್ರತಿಯೊಬ್ಬ ಕಲಿಕಾರ್ಥಿಯು ಕಲಿಕಾ ಸಾಮಗ್ರಿಯ ಗುಣಮಟ್ಟ ಆಧರಿಸಿ ಸೂಚನೆಗಳನ್ನು ಅನುಸರಿಸಿ ಮೌಲ್ಯಮಾಪನ ಮಾಡಿ ಅಧ್ಯಯನ ಕೇಂದ್ರಗಳು/ ಕೇಂದ್ರ ಕಚೇರಿ, ಬೆಂಗಳೂರು ಇವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಬೇಕು.

# 8. ಸಂಪರ್ಕ ತರಗತಿ

ಕೃಷಿ ವಿಜ್ಞಾನ ಕೇಂದ್ರಗಳು / ರೈತ ತರಬೇತಿ ಸಂಸ್ಥೆ / ಕೃಷಿ ಮಹಾವಿದ್ಯಾಲಯ / ಕೃಷಿ ಇಂಜಿನಿಯರಿಂಗ್ ಮಹಾವಿದ್ಯಾಲಯಗಳಲ್ಲಿ ಸಂಪರ್ಕ ತರಗತಿಗಳನ್ನು ಅಯೋಜಿಸಲಾಗುವುದು. ಪ್ರತಿ ತಂಡದ ಅಭ್ಯರ್ಥಿಗಳಿಗೂ ನುರಿತ ತಜ್ಞರೊಂದಿಗೆ ಮುಖಾಮುಖಿ ವಿಚಾರಗಳನ್ನು ಚರ್ಚೆಮಾಡಿ ಅವರ ಅನುಮಾನಗಳನ್ನು ಪರಿಹರಿಸಿಕೊಳ್ಳಲು ಮತ್ತು ಎಲ್ಲಾ ವಿಚಾರವನ್ನು ಅರ್ಥೈಸಿಕೊಳ್ಳಲು

ಅವಕಾಶವಿರುತ್ತದೆ. ಒಂದು ವರ್ಷದ ಕೃಷಿ ಡಿಪ್ಲೊಮಾಗೆ ಒಂದು ಸೆಮಿಸ್ಟರ್‌ನಲ್ಲಿ ಒಂದು ವಾರದಂತೆ ಎರಡು ವಾರ ಸಂಪರ್ಕ ತರಗತಿಗಳಿರುತ್ತವೆ. **ಈ ತರಗತಿಗಳಿಗೆ ಕಡ್ಡಾಯವಾಗಿ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಬಂದು ಹೋಗಬೇಕು. ಈ ಅವಧಿಯಲ್ಲಿ ಯಾವುದೇ ರೀತಿಯ ಉಚಿತ ವಸತಿ/ ಇತರ ಸೌಲಭ್ಯಗಳಿರುವುದಿಲ್ಲ.**

ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ನೋಂದಾಯಿಸಿದ ಅಭ್ಯರ್ಥಿಗಳಿಗೆ 10 ದಿನಗಳ ಕಾಲ ಸಂಪರ್ಕ ತರಗತಿಗಳನ್ನು ಮತ್ತು ಒಂದು ದಿನ ಲಿಖಿತ ಪರೀಕ್ಷೆಯನ್ನು ಆಯೋಜಿಸಲಾಗುವುದು. **ಈ ತರಗತಿಗಳಿಗೆ ಕಡ್ಡಾಯವಾಗಿ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗಬೇಕು. ಈ ಅವಧಿಯಲ್ಲಿ ಯಾವುದೇ ರೀತಿಯ ಉಚಿತ ವಸತಿ/ ಇತರ ಸೌಲಭ್ಯಗಳಿರುವುದಿಲ್ಲ.**

## 9. ಸಮಾಲೋಚನಾ ಕಾರ್ಯಕ್ರಮ

ದೂರ ಶಿಕ್ಷಣ ಕೋರ್ಸ್‌ಗಳಿಗೆ ವಿಶ್ವವಿದ್ಯಾನಿಲಯವು ಸಮಾಲೋಚನಾ ಕಾರ್ಯಕ್ರಮಗಳನ್ನು ಏರ್ಪಡಿಸುತ್ತದೆ. ಇದು ಕಲಿಕಾರ್ಥಿ ಮತ್ತು ಸಮಾಲೋಚಕರು ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ಚರ್ಚೆ ನಡೆಸಲು ಅವಕಾಶ ಒದಗಿಸುತ್ತದೆ. ಇಂತಹ ಸಮಾಲೋಚನೆಯ ಉದ್ದೇಶವೆಂದರೆ ಅಭ್ಯರ್ಥಿಗಳಿಗೆ ಎದುರಾಗುವ ಕೆಲವು ಸಮಸ್ಯೆಗಳಿಗೆ ಪರಿಣಿತ ಸಮಾಲೋಚಕರಿಂದ ಸ್ಪಷ್ಟೀಕರಣ ದೊರಕಿಸಿಕೊಡುವುದೇ ಆಗಿದೆ.

ಸಮಾಲೋಚನಾ ಕಾರ್ಯಕ್ರಮವನ್ನು ಅಧಿಸೂಚಿಸಿದ ಕಲಿಕಾರ್ಥಿ ಅಧ್ಯಯನ ಕೇಂದ್ರಗಳಲ್ಲಿ ನಡೆಸಲಾಗುವುದು. ಸಂಯೋಜಕರು, ದೂರ ಶಿಕ್ಷಣ ಘಟಕ, ಬೆಂಗಳೂರು ಇವರು ಅಭ್ಯರ್ಥಿಗಳಿಗೆ ಸಮಾಲೋಚನಾ ಕಾರ್ಯಕ್ರಮದ ದಿನಾಂಕ, ಅವಧಿ ಮತ್ತು ಕೇಂದ್ರಗಳ ಬಗ್ಗೆ ಮಾಹಿತಿಯನ್ನು ಸುತ್ತೋಲೆಯ ಮೂಲಕ ತಿಳಿಸುವರು.

ಸಮಾಲೋಚನಾ ಅಭ್ಯರ್ಥಿಗಳಿಗೆ ವಿಷಯ ವಸ್ತುವನ್ನು ಅಭ್ಯಾಸ ಮಾಡುವಾಗ ಎದುರಾಗುವ ಕ್ಲಿಷ್ಟಕರ ಅಂಶಗಳ ಬಗ್ಗೆ ಹಾಗೂ ಅದನ್ನು ಪರಿಹರಿಸಿಕೊಳ್ಳುವ ಬಗ್ಗೆ ಸಮಾಲೋಚಕರು ಅಗತ್ಯ ಸಹಾಯ ಮಾಡುವರು. ಆದ್ದರಿಂದ, **ಕಲಿಕಾರ್ಥಿಗಳು ಸಮಾಲೋಚನಾ ಕಾರ್ಯಕ್ರಮಕ್ಕೆ ಹಾಜರಾಗುವುದಕ್ಕೆ/ಬರುವುದಕ್ಕೆ ಮುಂಚಿತವಾಗಿ ಸ್ವಯಂ ಕಲಿಕಾ ಸಾಮಗ್ರಿಯನ್ನು ಅಭ್ಯಾಸ ಮಾಡಿ, ಚರ್ಚೆ ಮಾಡಬೇಕಾದ ಅಂಶಗಳನ್ನು ಗುರುತಿಸಿಕೊಂಡು ಹಾಜರಾಗಬೇಕು/ಬರಬೇಕು.**

### ಪರೀಕ್ಷಾ ನೀತಿಯ ಬಗ್ಗೆ ಮಾಹಿತಿ

ದೂರ ಶಿಕ್ಷಣ ಘಟಕವು ಪ್ರತಿ ಶೈಕ್ಷಣಿಕ ಕೋರ್ಸ್‌ಗಳಿಗೂ ಪ್ರತ್ಯೇಕ ಲಿಖಿತ ಪರೀಕ್ಷೆಗಳನ್ನು ನಡೆಸುತ್ತದೆ. ಸಂಪರ್ಕ ತರಗತಿಗಳಿಗೆ ಹಾಜರಾದವರು ಮಾತ್ರ ಲಿಖಿತ ಪರೀಕ್ಷೆ ಬರೆಯಲು ಅರ್ಹರಿರುತ್ತಾರೆ.

## 10. ಮೌಲ್ಯಮಾಪನ

ಮೌಲ್ಯಮಾಪನವು ದೂರ ಶಿಕ್ಷಣದ ಅವಿಭಾಜ್ಯ ಅಂಗವಾಗಿದೆ, ಇದರ ಉದ್ದೇಶ ಅಧ್ಯಯನ ಸಾಮಾಗ್ರಿಗಳಿಂದ ಅಭ್ಯರ್ಥಿಗಳು ಎಷ್ಟರ ಮಟ್ಟಿಗೆ ತಿಳುವಳಿಕೆ ಮೂಡಿಸಿಕೊಂಡಿದ್ದಾರೆ ಎಂಬುದನ್ನು ಪರೀಕ್ಷಿಸುವುದೇ ಆಗಿದೆ. ಅಧ್ಯಯನವನ್ನು ಹೇಗೆ ನಡೆಸುತ್ತಾರೆ ಎಂಬುದನ್ನು ತಿಳಿದುಕೊಂಡು ಅಭ್ಯರ್ಥಿಯ ಸಾಧನಾ ಮಟ್ಟವನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿದೆ. ಈ ಕೋರ್ಸ್‌ಗಳಿಗೆ ನಿಗದಿಪಡಿಸಿರುವ ಮೌಲ್ಯಮಾಪನ ರೀತಿಯನ್ನು ಸಂಪರ್ಕ ತರಗತಿಗಳ ಹಾಜರಾತಿ ಮತ್ತು ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ನಿರ್ಧರಿಸಲಾಗುವುದು.

| ಅಂಕಗಳು (ಶೇ.) | ಶ್ರೇಣಿ |
|---|---|
| 60 ಮತ್ತು ಮೇಲ್ಪಟ್ಟು | ಪ್ರಥಮ ದರ್ಜೆ |
| 50–59.99 | ದ್ವಿತೀಯ ದರ್ಜೆ |
| 40–49.99 | ಉತ್ತೀರ್ಣ |
| 40 ರ ಕೆಳಪಟ್ಟು | ಅನುತ್ತೀರ್ಣ |

## 11. ತಾತ್ಕಾಲಿಕ ಶೈಕ್ಷಣಿಕ ಯೋಜನೆ

ಕೃಷಿ ವಿಶ್ವವಿದ್ಯಾನಿಲಯದ ವಿವಿಧ ಶಿಕ್ಷಣ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ತಾತ್ಕಾಲಿಕವಾಗಿ ಶೈಕ್ಷಣಿಕ ಯೋಜನೆಯನ್ನು ಈ ಕೆಳಕಂಡಂತೆ ನೀಡಿದೆ.

| ಕ್ರಮ ಸಂಖ್ಯೆ | ಶೈಕ್ಷಣಿಕ ಚಟುವಟಿಕೆಗಳು | ಮೊದಲನೇ ಸೆಮಿಸ್ಟರ್ ಶಿಕ್ಷಣ ಕ್ರಮ | ಎರಡನೇ ಸೆಮಿಸ್ಟರ್ ಶಿಕ್ಷಣ ಕ್ರಮ |
|---|---|---|---|
| 1 | ಪ್ರವೇಶ ಪ್ರಕಟಣೆ | ಮಾರ್ಚ್ | – |
| 2 | ಪ್ರವೇಶಾತಿ ಕೊನೆಯ ದಿನ | ಏಪ್ರಿಲ್ | – |
| 3 | ಸ್ವಯಂ ಕಲಿಕಾ ಸಾಮಗ್ರಿ ವಿತರಣೆ | ಮೇ | ಜನವರಿ |
| 4 | ಸಂಪರ್ಕ ತರಗತಿಗಳು | ಅಕ್ಟೋಬರ್ | ಫೆಬ್ರವರಿ |
| 5 | ಪರೀಕ್ಷೆಗಳು | ನವೆಂಬರ್ | ಮಾರ್ಚ್ |
| 6 | ಫಲಿತಾಂಶ ಪ್ರಕಟಣೆ | ಜನವರಿ | ಜೂನ್ |

# 12. ಪ್ರವೇಶಾತಿ ಶುಲ್ಕದ ಮಾಹಿತಿ

ಪ್ರತಿ ಕೋರ್ಸ್ ಶುಲ್ಕವನ್ನು ಡಿ.ಡಿ. ಮುಖಾಂತರ **Comptroller, UAS, GKVK, Bengaluru - 560 065** ಇವರ ಹೆಸರಿಗೆ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಸಲ್ಲಿಸಬೇಕು. ಒಂದು ವರ್ಷದ ಕೃಷಿ ಡಿಪ್ಲೋಮಾ ಕೋರ್ಸ್‌ಗೆ ಮಾತ್ರ ಶುಲ್ಕವನ್ನು ಎರಡು ಕಂತುಗಳಲ್ಲಿ (ಪ್ರತಿ ಸೆಮಿಸ್ಟರ್‌ಗೆ ರೂ. 5000-00 ದಂತೆ) ಪಾವತಿಸಬಹುದು.

# 13. ಫಲಿತಾಂಶ ಘೋಷಣೆ

ಅಭ್ಯರ್ಥಿಗಳು ಪರೀಕ್ಷೆಯಲ್ಲಿ ಪ್ರತಿ ವಿಷಯದಲ್ಲಿ ಕನಿಷ್ಠ 40 ಅಂಕಗಳನ್ನು ಪಡೆಯಬೇಕು. ಯಾವ ಅಭ್ಯರ್ಥಿಗಳು 40ಕ್ಕಿಂತ ಕಡಿಮೆ ಅಂಕಗಳನ್ನು ಪಡೆಯುತ್ತಾರೋ ಅವರನ್ನು ಪರೀಕ್ಷೆಯಲ್ಲಿ ಅನುತ್ತೀರ್ಣರೆಂದು ಪರಿಗಣಿಸಲಾಗುತ್ತದೆ. ಇಂತಹ ಅಭ್ಯರ್ಥಿಗಳು ಅನುತ್ತೀರ್ಣರಾದ ವಿಷಯಕ್ಕೆ ಪುನಃ ಪರೀಕ್ಷೆಗೆ ಪೂರಕ ಪರೀಕ್ಷೆ ಶುಲ್ಕವನ್ನು ಪ್ರತಿ ವಿಷಯಕ್ಕೆ ರೂ. 100/- ರಂತೆ ಪಾವತಿಸಿ ಅಧ್ಯಯನ ಕೇಂದ್ರದಲ್ಲಿ ಹಾಜರಾಗಬೇಕು.

ಎಲ್ಲಾ ತರಹದ ಸುತ್ತೋಲೆಗಳು, ಪರೀಕ್ಷಾ ಪ್ರಕಟಣೆಗಳು ಇನ್ನಿತರ ಪತ್ರ ವ್ಯವಹಾರಗಳನ್ನು **ಸಾಮಾನ್ಯ ಅಂಚೆ ಮೂಲಕ** ಅಭ್ಯರ್ಥಿಗಳಿಗೆ ರವಾನಿಸಲಾಗುವುದು. ಅರ್ಜಿ, ಸುತ್ತೋಲೆ, ಪ್ರಕಟಣೆ ಮತ್ತಿತರ ಮಾಹಿತಿಯನ್ನು ಅಭ್ಯರ್ಥಿಯ ಅಧ್ಯಯನ ಕೇಂದ್ರ ಅಥವಾ ಕೇಂದ್ರ ಕಚೇರಿಯಿಂದ ಪಡೆಯಬಹುದಾಗಿದೆ.

# 14. ಅರ್ಜಿ ಪಡೆಯುವ ವಿಧಾನ

ಆಸಕ್ತ ಅಭ್ಯರ್ಥಿಗಳು ಎಲ್ಲಾ (ಸರ್ಟಿಫಿಕೇಟ್ ಕೋರ್ಸ್‌ಗಳಿಗೆ / ಒಂದು ವರ್ಷದ ಕೃಷಿ ಡಿಪ್ಲೊಮಾ) ಕೋರ್ಸ್‌ಗೆ ಅರ್ಜಿ ಶುಲ್ಕ **ರೂ 100/-** (ರೂ ಒಂದು ನೂರು ಮಾತ್ರ) ಪಾವತಿಸಬೇಕು. ಅರ್ಜಿ ಶುಲ್ಕವನ್ನು ನಗದು ಅಥವಾ ಪೋಸ್ಟಲ್ ಆರ್ಡರ್/ಡಿ.ಡಿ.ಯನ್ನು **Comptroller, UAS, Bangalore - 560 065** ಇವರ ಪರವಾಗಿ ಸಲ್ಲಿಸಿ, ಸಂಯೋಜಕರು/ಮುಖ್ಯಸ್ಥರು, ದೂರ ಶಿಕ್ಷಣ ಘಟಕ, ವಿಸ್ತರಣಾ ನಿರ್ದೇಶನಾಲಯ, ಜಿಕೆವಿಕೆ. ಬೆಂಗಳೂರು - 560 065 ಇವರಿಂದ ಅರ್ಜಿ ಪಡೆಯಬಹುದು (ಡಿ.ಡಿ. / ಪೋಸ್ಟಲ್ ಆರ್ಡರ್ ಹಿಂಭಾಗದಲ್ಲಿ ಅಭ್ಯರ್ಥಿಯ ಹೆಸರನ್ನು ನಮೂದಿಸಬೇಕು).

ಅಂಚೆಯ ಮೂಲಕ ಅರ್ಜಿ ಪಡೆಯಲಿಚ್ಛಿಸುವ ಅಭ್ಯರ್ಥಿಗಳು ರೂ. 10/- ಮೌಲ್ಯದ ಸ್ಟಾಂಪ್ ಅಂಟಿಸಿದ ಸ್ವವಿಳಾಸವಿರುವ 12" X 10" ಅಳತೆಯ ಲಕೋಟೆಯನ್ನು ಡಿ.ಡಿ./ಪೋಸ್ಟಲ್ ಆರ್ಡರ್ ಜೊತೆಗೆ ಲಗತ್ತಿಸಿ ಪಡೆಯಬಹುದು. ಅಂತರ್ಜಾಲ www.uasbangalore.edu.in ನಿಂದ ಡೌನ್‌ಲೋಡ್ ಮಾಡಿ, ಭರ್ತಿ ಮಾಡಿದ ಅರ್ಜಿಗಳನ್ನು (ನಿಗದಿತ ಶುಲ್ಕದೊಂದಿಗೆ), ಸಂಯೋಜಕರು ಮತ್ತು ಮುಖ್ಯಸ್ಥರು, ದೂರ ಶಿಕ್ಷಣ ಘಟಕ, ರೈತ ತರಬೇತಿ ಸಂಸ್ಥೆ, ವಿಸ್ತರಣಾ ನಿರ್ದೇಶನಾಲಯ, ಜಿಕೆವಿಕೆ, ಬೆಂಗಳೂರು - 560 065 ಇವರಿಗೆ ಸಲ್ಲಿಸುವುದು ಅಥವಾ ಕಳುಹಿಸಿಕೊಡುವುದು. ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸುವ ಮೊದಲು ತಾಳೆ ಪಟ್ಟಿಯಲ್ಲಿರುವಂತೆ ಪರೀಕ್ಷಿಸಿ ಸಲ್ಲಿಸುವುದು.

## ತಾಳೆ ಪಟ್ಟಿ

| ಕ್ರಸಂ | ವಿವರ | ಲಗತ್ತಿಸಿದೆ | ಲಗತ್ತಿಸಿಲ್ಲ |
|---|---|---|---|
| 1 | ಭರ್ತಿ ಮಾಡಿದ ಅರ್ಜಿ | | |
| 2 | ಜಾತಿ ಪ್ರಮಾಣ ಪತ್ರದ ದೃಢೀಕೃತ ನಕಲು | | |
| 3 | ಎಸ್.ಎಸ್.ಎಲ್.ಸಿ ಅಂಕಪಟ್ಟಿ ದೃಢೀಕೃತ ಪ್ರತಿ | | |
| 4 | ಅಭ್ಯರ್ಥಿ ಉದ್ಯೋಗಿಯಾಗಿದ್ದಾರೆ ಉದ್ಯೋಗದಾತರಿಂದ ಪಡೆದ ನಿರಾಪೇಕ್ಷಣಾ ಪತ್ರದ ಮೂಲ ಪ್ರತಿ | | |
| 5 | ಆಧಾರ್ ಕಾರ್ಡ್‌ನ ದೃಢೀಕೃತ ಪ್ರತಿ | | |
| 6 | ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ (ಎರಡು) | | |
| 7 | ಅರ್ಜಿ ಶುಲ್ಕ ಡಿ.ಡಿ / ಪೋಸ್ಟಲ್ ಆರ್ಡರ್ ರೂಪದಲ್ಲಿ | | |
| 8 | ಕೋರ್ಸ್ ಶುಲ್ಕ ಡಿ.ಡಿ / ಪೋಸ್ಟಲ್ ಆರ್ಡರ್ ರೂಪದಲ್ಲಿ | | |

**ಸೂಚನೆ: ಜೆರಾಕ್ಸ್ ಪ್ರತಿಗಳನ್ನು ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿ ಲಗತ್ತಿಸುವುದು**

# 15. ಅರ್ಜಿ ವಿತರಣೆ ವಿವರ

| ಕ್ರಸಂ | ಕೋರ್ಸ್ | ಅರ್ಜಿ ವಿತರಿಸುವ ದಿನಾಂಕ | ಭರ್ತಿ ಮಾಡಿದ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ |
|---|---|---|---|
| | **ಡಿಪ್ಲೊಮಾ ಕೋರ್ಸ್** | | |
| 1 | ಒಂದು ವರ್ಷದ ಡಿಪ್ಲೊಮಾ (ಕೃಷಿ) | 9–3–2026 ರಿಂದ 11–4–2026 | 11–4–2026 |
| | **ಸರ್ಟಿಫಿಕೇಟ್ ಕೋರ್ಸ್‌ಗಳು** | | |
| 1 | ಕೃಷಿಯಲ್ಲಿ ಬೀಜೋತ್ಪಾದನೆ ತಾಂತ್ರಿಕತೆಗಳು | 9–3–2026 ರಿಂದ 11–4–2026 | 11–4–2026 |
| 2 | ಕೃಷಿಯಲ್ಲಿ ಯಂತ್ರೋಪಕರಣಗಳ ನಿರ್ವಹಣೆ | | |
| 3 | ಜೇನು ಸಾಕಣೆ | | |
| 4 | ಸಮಗ್ರ ಕೃಷಿ | | |

**ಸೂಚನೆ: ಒಮ್ಮೆ ಸಲ್ಲಿಸಿದ ಕೋರ್ಸ್ ಶುಲ್ಕವನ್ನು ಯಾವುದೇ ಕಾರಣಕ್ಕೂ ಮರು ಪಾವತಿ ಮಾಡುವುದಿಲ್ಲ**

## ಗಮನಕ್ಕೆ

- ಅರ್ಜಿ ನಮೂನೆ ಕೃ.ವಿ.ವಿ., ಬೆಂಗಳೂರು ಅಧಿಕೃತ ಜಾಲತಾಣದಿಂದ/website **(http://www.uasbangalore.edu.in)** ಡೌನ್‌ಲೋಡ್ ಮಾಡಿಕೊಳ್ಳಬಹುದು.
- ಅಭ್ಯರ್ಥಿಗಳು ವಿಶ್ವವಿದ್ಯಾನಿಲಯವು ಪ್ರಕಟಿಸಿರುವ ಪ್ರಾದೇಶಿಕ ಕೇಂದ್ರಗಳು ಮತ್ತು ದೂರ ಶಿಕ್ಷಣ ಘಟಕದ ಕೇಂದ್ರ ಕಚೇರಿಯನ್ನು ಮಾತ್ರ ಸಂಪರ್ಕಿಸಬೇಕು.

## ಪ್ರಮುಖ ದಿನಗಳು

| | |
|---|---|
| ಪ್ರವೇಶಾತಿ ಪ್ರಾರಂಭ | 9–3–2026 ರಿಂದ 11–4–2026 |
| ಅರ್ಜಿ ಸಲ್ಲಿಕೆಗೆ ಕಡೆಯ ದಿನಾಂಕ | 11–4–2026 |

- ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ವ್ಯಾಪ್ತಿಗೆ ಬರುವಂತಹ ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಪ್ರವೇಶ ಅಪೇಕ್ಷಿಸುವ ಅಭ್ಯರ್ಥಿಗಳು ಶುಲ್ಕ ಪಾವತಿಸಿ ಸರಿಯಾಗಿ ಭರ್ತಿಮಾಡಿದ ಅರ್ಜಿಯನ್ನು ಸಂಬಂಧಿಸಿದ **ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರಿಗೆ** ಸಲ್ಲಿಸುವುದು.

**ಅಥವಾ**

- ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರಿನ ಕೇಂದ್ರ ಕಚೇರಿ, ವಿಸ್ತರಣಾ ನಿರ್ದೇಶನಾಲಯ ಇಲ್ಲಿ ಪ್ರವೇಶ ಅಪೇಕ್ಷಿಸುವ ಅಭ್ಯರ್ಥಿಗಳು ಭರ್ತಿಮಾಡಿದ ಅರ್ಜಿಯನ್ನು, ಸಂಯೋಜಕರು ಮತ್ತು ಮುಖ್ಯಸ್ಥರು, ದೂರ ಶಿಕ್ಷಣ ಘಟಕ, ರೈತ ತರಬೇತಿ ಸಂಸ್ಥೆ, ಜಿಕೆವಿಕೆ, ಬೆಂಗಳೂರು – 560 065 ಇವರಿಗೆ ಸಲ್ಲಿಸುವುದು.

## ವಿಶೇಷ ಗಮನಕ್ಕೆ

1. **ಹೊರರಾಜ್ಯದ ಅಭ್ಯರ್ಥಿಗಳು ಶಿಕ್ಷಣ ಕ್ರಮಗಳಿಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಆದರೆ, ಅವರು ಕರ್ನಾಟಕ ರಾಜ್ಯದೊಳಗಿನ ಪ್ರಾದೇಶಿಕ ಕೇಂದ್ರ / ಕೇಂದ್ರಸ್ಥಾನದಲ್ಲಿ ಪ್ರವೇಶಾತಿಯನ್ನು ಪಡೆಯಬೇಕು ಮತ್ತು ಕನ್ನಡ ಓದಲು ಹಾಗೂ ಬರೆಯಲು ಬಲ್ಲವರಾಗಿರಬೇಕು.**
2. **ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿದ್ದು, ಉತ್ತಮ ಸಂಪನ್ಮೂಲ ವ್ಯಕ್ತಿಗಳನ್ನು ಸೃಜಿಸುತ್ತದೆ.**

# 16. ಅಭ್ಯರ್ಥಿಗಳಿಗೆ ಮುಖ್ಯ ಸೂಚನೆಗಳು

1. ಅಭ್ಯರ್ಥಿಗಳು ತಮ್ಮ ಅರ್ಹತೆಯನ್ನು ಖಚಿತಪಡಿಸಿಕೊಂಡ ನಂತರವೇ ಅರ್ಜಿಯನ್ನು ಸಲ್ಲಿಸಬೇಕು
2. ಅರ್ಜಿಯನ್ನು ಭರ್ತಿ ಮಾಡುವ ಮೊದಲು ಅಭ್ಯರ್ಥಿಗಳು ವಿವರಣಾ ಪುಸ್ತಕದಲ್ಲಿರುವ ಸೂಚನೆಗಳನ್ನು ಜಾಗರೂಕತೆಯಿಂದ ಓದಬೇಕು
3. ವಿಶ್ವವಿದ್ಯಾನಿಲಯದ ಜಾಲತಾಣ / ವೆಬ್‌ಸೈಟ್‌ನಿಂದ ಅರ್ಜಿ ನಮೂನೆಯನ್ನು ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ಅಧಿಕೃತ ಜಾಲತಾಣದಿಂದ **(http://www.uasbangalore.edu.in)** ಡೌನ್‌ಲೋಡ್ ಮಾಡಿಕೊಂಡು, ಭರ್ತಿ ಮಾಡಿದ ಅರ್ಜಿಯ ಜೊತೆಯಲ್ಲಿ ಅರ್ಜಿ ಶುಲ್ಕ ಮತ್ತು ಕೋರ್ಸ್ ಶುಲ್ಕದ ಡಿ.ಡಿ .ಯನ್ನು ಲಗತ್ತಿಸಬೇಕು.
4. ಅಭ್ಯರ್ಥಿಯ ವಾಟ್ಸಪ್ ಸಂಖ್ಯೆಯನ್ನು ಅರ್ಜಿಯಲ್ಲಿ ಕಡ್ಡಾಯವಾಗಿ ನಮೂದಿಸಬೇಕು
5. ಅರ್ಜಿಯೊಂದಿಗೆ ಈ ಕೆಳಕಂಡ ದೃಢೀಕೃತ (Attested) ದಾಖಲಾತಿಗಳನ್ನು ಸಲ್ಲಿಸಬೇಕು
   - ಎಸ್.ಎಸ್.ಎಲ್.ಸಿ. ಅಂಕಪಟ್ಟಿ
   - ಪ.ಜಾ/ಪ.ಪಂ ಜಾತಿ ಮತ್ತು ಆದಾಯ ಪ್ರಮಾಣ ಪತ್ರ (ಅನ್ವಯವಾದರೆ ಮಾತ್ರ)
   - ಆಧಾರ್ ಕಾರ್ಡ್
   - ಎರಡು ಪಾಸ್ ಪೋರ್ಟ್ ಅಳತೆಯ Photos ಅರ್ಜಿಯ ಜೊತೆ ಲಗತ್ತಿಸುವುದು
   - ವಿಕಲಚೇತನರಾಗಿದ್ದಾರೆ ಧೃಡೀಕೃತ ದಾಖಲಾತಿಯನ್ನು ಲಗತ್ತಿಸುವುದು
6. ಭರ್ತಿ ಮಾಡಿದ ಅರ್ಜಿಯನ್ನು ಕೋರ್ಸ್ ಶುಲ್ಕದ ಡಿಮಾಂಡ್ ಡ್ರಾಫ್ಟ್‌ನೊಂದಿಗೆ ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಸಂಯೋಜಕರು ಮತ್ತು ಮುಖ್ಯಸ್ಥರು, ದೂರ ಶಿಕ್ಷಣ ಘಟಕ, ರೈತ ತರಬೇತಿ ಸಂಸ್ಥೆ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು – 560 065 ರವರಿಗೆ ಸಲ್ಲಿಸುವುದು
7. ಅಭ್ಯರ್ಥಿಗಳು ಅಧ್ಯಯನ ಕೇಂದ್ರದ ಹೆಸರನ್ನು ಅರ್ಜಿಯಲ್ಲಿ ಬರೆಯತಕ್ಕದ್ದು
8. ವಿಶ್ವವಿದ್ಯಾನಿಲಯದ ಅನುಮೋದನೆ ನಂತರವೇ ಪ್ರವೇಶಾತಿಯು ಸಂಪೂರ್ಣಗೊಳ್ಳುತ್ತದೆ
9. ಅಭ್ಯರ್ಥಿಗಳು ಕಾಲಕಾಲಕ್ಕೆ ವಿಶ್ವವಿದ್ಯಾನಿಲಯವು ಹೊರಡಿಸುವ ನಿಯಮ ನಿಬಂಧನೆಗಳನ್ನು ಪಾಲಿಸತಕ್ಕದ್ದು
10. ಅಭ್ಯರ್ಥಿಗಳು ಗುರುತಿನ ಚೀಟಿಯನ್ನು ಶಿಕ್ಷಣಕ್ರಮ ಮುಗಿಯುವವರೆಗೂ ಹೊಂದಿರಬೇಕು. ವಿಶ್ವವಿದ್ಯಾನಿಲಯದೊಂದಿಗೆ ವ್ಯವಹರಿಸುವ ಎಲ್ಲಾ ಸಂದರ್ಭಗಳಲ್ಲಿಯೂ ಅಭ್ಯರ್ಥಿಯು ತನ್ನ ನೋಂದಣಿ ಸಂಖ್ಯೆಯನ್ನು ಬರೆಯಬೇಕು.

11. ಅಭ್ಯರ್ಥಿಯು ತನ್ನ ವಯಸ್ಸು / ವಿದ್ಯಾರ್ಹತೆ ಮೊದಲಾದವುಗಳಿಗೆ ಸಂಬಂಧಿಸಿದಂತೆ ತಪ್ಪು ಮಾಹಿತಿಗಳನ್ನು ನೀಡಿದರೆ ಅಥವಾ ಯಾವುದಾದರೂ ನಿಯಮಗಳನ್ನು ಉಲ್ಲಂಘಿಸಿದರೆ ಶಿಕ್ಷಣ ಕ್ರಮದಿಂದ ಹಾಗೂ ನೋಂದಣಿಯಿಂದ ಹೊರಗಿಡಲಾಗುವುದು ಹಾಗೂ ಕಾನೂನು ಪ್ರಕಾರ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು

12. ಅಪೂರ್ಣ ಅರ್ಜಿಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸಲಾಗುವುದು

13. ಎಲ್ಲಾ ನ್ಯಾಯ ವ್ಯಾಜ್ಯಗಳು ಬೆಂಗಳೂರು ನಗರ ನ್ಯಾಯಲಯಗಳ ವ್ಯಾಪ್ತಿಗೆ ಮಾತ್ರ ಬರುತ್ತದೆ

14. ಅಭ್ಯರ್ಥಿಯು ಅಭ್ಯಾಸ ಮಾಡಲು ಇಚ್ಚಿಸುವ ಅಧ್ಯಯನ ಕೇಂದ್ರದ ಆಯ್ಕೆಯ ಆದ್ಯತೆಯನ್ನು ಅರ್ಜಿ ನಮೂನೆಯಲ್ಲಿ ನಿಗದಿತ ಸ್ಥಳದಲ್ಲಿ ನಮೂದಿಸಬೇಕು.

15. ಅಭ್ಯರ್ಥಿಯು ತನ್ನ ಅರ್ಜಿಯಲ್ಲಿ ಒದಗಿಸಿರುವ ಮಾಹಿತಿ ಮತ್ತು ವಿವರಗಳೇ ಅಂತಿಮವಾದುದೆಂದು ಪರಿಗಣಿಸಲಾಗುವುದು

16. ಒಮ್ಮೆ ಸಲ್ಲಿಸಿದ ಅರ್ಜಿಯ ನಂತರ ಯಾವುದೇ ಹೆಚ್ಚಿನ ದಾಖಲೆ ಅಥವಾ ಪ್ರಮಾಣ ಪತ್ರಗಳನ್ನು ಸ್ವೀಕರಿಸಲಾಗುವುದಿಲ್ಲ

17. ಅಭ್ಯರ್ಥಿಗಳು ತಮ್ಮ ಅರ್ಹತೆಯನ್ನು ಖಚಿತಗೊಳಿಸಿಕೊಂಡ ನಂತರವೇ ಅರ್ಜಿಯನ್ನು ಸಲ್ಲಸಬೇಕು

18. ಭರ್ತಿ ಮಾಡಿದ ಅರ್ಜಿ ನಮೂನೆಯನ್ನು ಸಲ್ಲಿಸುವ ಮೊದಲು ಅಭ್ಯರ್ಥಿಯು ಉಲ್ಲೇಖನಕ್ಕೆ/ ಅಥವಾ ಇತರೆ ಲಿಖಿತ ವ್ಯವಹಾರಕ್ಕೆ ಅರ್ಜಿ ನಮೂನೆಯ ಜೆರಾಕ್ಸ್ ಪ್ರತಿಯನ್ನು ತಮ್ಮಲ್ಲಿ ಹೊಂದಿರತಕ್ಕದ್ದು

19. ಅಂಕಪಟ್ಟಿ ಹೊಂದಿರದ ಅಭ್ಯರ್ಥಿಗಳು ತಾವು ಉತ್ತೀರ್ಣರಾದ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಿಂದ ಪ್ರವೇಶ ದಾಖಲಾತಿ, ಶೈಕ್ಷಣಿಕ ವರ್ಷಗಳು, ಜಾತಿ ಮತ್ತು ಮಾತೃ ಭಾಷೆಯನ್ನು ನಮೂದಿಸಿರುವ ಅಧ್ಯಯನ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು

20. ಅಭ್ಯರ್ಥಿಯು ಸ್ವಇಚ್ಚೆಯಿಂದ ಪಡೆದ ಆಯ್ಕೆ ಮಾಡಿದ ಅಧ್ಯಯನ ಕೇಂದ್ರದಿಂದ ಇತರ ಯಾವುದೇ ಅಧ್ಯಯನ ಕೇಂದ್ರಕ್ಕೆ ವರ್ಗಾವಣೆ ಕೋರಿಕೆಯನ್ನು ಪರಿಗಣಿಸಲಾಗುವುದಿಲ್ಲ

21. ಸರ್ಕಾರಿ / ಖಾಸಗಿ ನೌಕರಿಯಲ್ಲಿರುವವರು ಅರ್ಜಿಗಳನ್ನು ತಮ್ಮ ಮೇಲಾಧಿಕಾರಿಗಳ ಮುಖಾಂತರ ಕಳುಹಿಸುವುದು ಕಡ್ಡಾಯವಾಗಿರುತ್ತದೆ

22. ಪ್ರತಿ ಕೋರ್ಸ್‌ಗೂ ಪ್ರತ್ಯೇಕ ಅರ್ಜಿ ಸಲ್ಲಿಸಬೇಕು. ಒಂದೇ ಅರ್ಜಿಯಲ್ಲಿ ಎರಡು ಅಥವಾ ಮೂರು ಕೋರ್ಸ್‌ಗಳ ಹೆಸರು ಬರೆದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು

23. ಆಧಾರ್ ಸಂಖ್ಯೆಯನ್ನು ಕಡ್ಡಾಯವಾಗಿ ಬರೆದು ಒಂದು ದೃಢೀಕೃತ ಪ್ರತಿಯನ್ನು ಲಗತ್ತಿಸಬೇಕು

24. ಅಭ್ಯರ್ಥಿಗಳು ಕನ್ನಡದಲ್ಲಿ ಓದಲು ಮತ್ತು ಬರೆಯಲು ಬರುವಂತಿರಬೇಕು

## ಇತರೆ ಮಾಹಿತಿಗಳು

### ವಿಳಾಸ ಬದಲಾವಣೆ

ಪ್ರವೇಶಾತಿ ಸಮಯದಲ್ಲಿ ಅಭ್ಯರ್ಥಿಯು ನೀಡಿದ್ದ ವಿಳಾಸವನ್ನು ಬದಲಾವಣೆ ಮಾಡಿಕೊಳ್ಳಬೇಕಾದ ಸಂದರ್ಭದಲ್ಲಿ ಅಭ್ಯರ್ಥಿಯೇ **ಸಂಯೋಜಕರು ಮತ್ತು ಮುಖ್ಯಸ್ಥರು, ದೂರ ಶಿಕ್ಷಣ ಘಟಕ, ರೈತ ತರಬೇತಿ ಸಂಸ್ಥೆ, ವಿಸ್ತರಣಾ ನಿರ್ದೇಶನಾಲಯ, ಜಿಕೆವಿಕೆ, ಬೆಂಗಳೂರು – 560 065** ರವರಿಗೆ ಪತ್ರ ಬರೆದು ತಿಳಿಸಬೇಕು.

### ಹೆಸರು ಬದಲಾವಣೆ


ವ್ಯಾಸಾಂಗದ ಅವಧಿಯಲ್ಲಿ ಅಭ್ಯರ್ಥಿಯು ಹೆಸರು ಬದಲಾವಣೆ ಮಾಡಿಕೊಳ್ಳುವ ಸಂಬಂಧ ಈ ಕೆಳಕಂಡ ದೃಢೀಕರಿಸಿದ ದಾಖಲಾತಿಗಳನ್ನು ಸಲ್ಲಿಸಬೇಕು.


- ಹೆಸರು ಬದಲಾವಣೆ ಅರ್ಜಿ
- ಹೆಸರು ಬದಲಾವಣೆ ಸಂಬಂಧ ನ್ಯಾಯಾಲಯದಿಂದ ಪಡೆದಿರುವ ಜಡ್ಜ್‌ಮೆಂಟ್ (ಡಿಕ್ರಿ) ಛಾಯಾ ಪ್ರತಿ
- ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಎರಡು ಭಾವಚಿತ್ರಗಳು
- ಶುಲ್ಕ ಪಾವತಿಸಿದ ವಿವರಗಳು
- ಎಸ್.ಎಸ್.ಎಲ್.ಸಿ ಅಂಕಪಟ್ಟಿ ಛಾಯಾಪ್ರತಿ
- ಅಭ್ಯರ್ಥಿ ಗುರುತಿನ ಪತ್ರದ (ಐ.ಡಿ. ಕಾರ್ಡ್) ದೃಢೀಕರಣ ಛಾಯಾ ಪ್ರತಿ
- ಪ್ರವೇಶಾತಿ ಶುಲ್ಕ ಪಾವತಿಸಿದ ವಿವರದ ದೃಢೀಕೃತ ಛಾಯಾ ಪ್ರತಿ
- ವಾರ್ತಾ ಪತ್ರಿಕೆಯಲ್ಲಿ ನೀಡಿದ ಜಾಹಿರಾತು ಛಾಯಾ ಪ್ರತಿ


### ನಕಲು ಗುರುತಿನ ಪತ್ರ ನವೀಕರಣ


ಮೂಲ ಗುರುತಿನ ಕಾರ್ಡ್ ಕಳೆದು ಹೋದಲ್ಲಿ ರೂ. 100/– ಗಳನ್ನು ಪಾವತಿಸಿ ನಕಲು ಗುರುತಿನ ಕಾರ್ಡ್ ಪಡೆಯುವುದು. ಇದನ್ನು ಪಡೆಯಲು ದೃಢೀಕರಿಸಿದ ಅಂಕಪಟ್ಟಿಯ ಛಾಯಾಪ್ರತಿ, ಆಧಾರ್ ಕಾರ್ಡ್ ಮತ್ತು ಭಾವಚಿತ್ರವನ್ನು ಅರ್ಜಿಯ ಜೊತೆ ಲಗತ್ತಿಸಿ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸುವುದು.


**ಸಂಯೋಜಕರು ಮತ್ತು ಮುಖ್ಯಸ್ಥರು, ದೂರ ಶಿಕ್ಷಣ ಘಟಕ, ರೈತ ತರಬೇತಿ ಸಂಸ್ಥೆ,**
**ವಿಸ್ತರಣಾ ನಿರ್ದೇಶನಾಲಯ, ಜಿಕೆವಿಕೆ, ಬೆಂಗಳೂರು – 560 065 ಇವರಿಗೆ ಅಭ್ಯರ್ಥಿ ಪತ್ರ ಬರೆಯಬೇಕು**
















ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ

ವಿಸ್ತರಣಾ ನಿರ್ದೇಶಕರು
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ., ಬೆಂಗಳೂರು - 560 065

ಅಥವಾ

ಸಂಯೋಜಕರು ಮತ್ತು ಮುಖ್ಯಸ್ಥರು
ದೂರ ಶಿಕ್ಷಣ ಘಟಕ, ರೈತ ತರಬೇತಿ ಸಂಸ್ಥೆ ಕಟ್ಟಡ, ಕೃಷಿ ವಿಶ್ವವಿದ್ಯಾನಿಲಯ
ಜಿ.ಕೆ.ವಿ.ಕೆ., ಬೆಂಗಳೂರು - 560 065, ದೂರವಾಣಿ ಸಂಖ್ಯೆ : 080-23636353



ನ್ಯಾಕ್ ಎ+ ಮಾನ್ಯತೆ

# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

## ದೂರ ಶಿಕ್ಷಣ ಘಟಕ, ವಿಸ್ತರಣಾ ನಿರ್ದೇಶನಾಲಯ

ಜಿಕೆವಿಕೆ, ಬೆಂಗಳೂರು – 560 065

## 2026–27ನೇ ಸಾಲಿನ ದೂರ ಶಿಕ್ಷಣ ಕೋರ್ಸ್‌ಗೆ ಅರ್ಜಿ

ಅರ್ಜಿ ಸಂಖ್ಯೆ:

ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ

*ಅರ್ಜಿಯನ್ನು SSLC ಅಂಕಪಟ್ಟಿಯಲ್ಲಿರುವಂತೆ ಕನ್ನಡ ಭಾಷೆಯಲ್ಲಿ ಮಾತ್ರ ಭರ್ತಿ ಮಾಡಬೇಕು*

| | | |
|---|---|---|
| 1 | ನೀವು ಸೇರಬಯಸುವ ಕೋರ್ಸ್‌ನ ಹೆಸರು | |
| 2 | ಅಭ್ಯರ್ಥಿಯ ಹೆಸರು | |
| 3 | ತಂದೆಯ ಹೆಸರು | |
| 4 | ತಾಯಿಯ ಹೆಸರು | |
| 5 | ಹುಟ್ಟಿದ ದಿನಾಂಕ | |
| 6 | ಲಿಂಗ | ಸ್ತ್ರೀ / ಪುರುಷ / ತೃತೀಯ |
| 7 | ವಿವಾಹಿತರೆ ಅಥವಾ ಅವಿವಾಹಿತರೆ? | |
| 8 | ಜಾತಿ/ಪಂಗಡ | |
| 9 | ವಿದ್ಯಾಭ್ಯಾಸದ ಮಟ್ಟ | |
| 10 | ವಿಕಲಚೇತನರೆ? | ಹೌದು / ಇಲ್ಲ |
| 11 | ಮೊಬೈಲ್ ಸಂಖ್ಯೆ (Whatsapp No.) | |
| 12 | ಸಂಪರ್ಕ ವಿಳಾಸ | |
| 13 | ಆಧಾರ್ ಸಂಖ್ಯೆ | |
| 14 | ಕೋರ್ಸ್ ಶುಲ್ಕದ ಡಿ.ಡಿ. ಸಂಖ್ಯೆ ಮತ್ತು ದಿನಾಂಕ | |
| 15 | ಅಧ್ಯಯನ ಕೇಂದ್ರದ ಹೆಸರು | |
| 16 | ವೃತ್ತಿ | ಸರ್ಕಾರಿ ನೌಕರ / ಅರೆ ಸರ್ಕಾರಿ ನೌಕರ / ರೈತ / ನಿರುದ್ಯೋಗಿ / ಇತರೆ |
| 17 | ಸರ್ಕಾರಿ / ಅರೇ ಸರ್ಕಾರಿ ನೌಕರರಾದರೆ ಕೆಳಗಿನ ಮಾಹಿತಿ ತುಂಬಿರಿ | |

| ಸಂಸ್ಥೆಯ ಹೆಸರು | ಉದ್ಯೋಗದ ಹೆಸರು | ಸೇವೆಗೆ ಸೇರಿದ ದಿನಾಂಕ |
|---|---|---|
| | | |

ಈ ಮೇಲ್ಕಂಡ ಅಭ್ಯರ್ಥಿಯು ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನಲ್ಲಿ ಡಿಪ್ಲೊಮಾ / ಸರ್ಟಿಫಿಕೇಟ್ ಕೋರ್ಸ್‌ಗೆ ನೋಂದಾಯಿಸಲು ನಮ್ಮ ಅಭ್ಯಂತರವಿರುವುದಿಲ್ಲ.

ಮೇಲಾಧಿಕಾರಿಯ ಸಹಿ ಮತ್ತು ಮೊಹರು

### ಸ್ವಯಂ ದೃಢೀಕರಣ

18. ನಾನು ಮೇಲೆ ತಿಳಿಸಿರುವ ವಿವರಗಳು ಸರಿಯಾಗಿವೆಯೆಂದು ಮತ್ತು ನಿಜವೆಂದು ದೃಢೀಕರಿಸುತ್ತೇನೆ. ಸಲ್ಲಿಸಿದ ಮಾಹಿತಿ ತಪ್ಪು ಎಂದು ಕಂಡುಬಂದಲ್ಲಿ ಕಾನೂನಿನಂತೆ ಕ್ರಮ ಕೈಗೊಳ್ಳಬಹುದು ಹಾಗೂ ವಿಶ್ವವಿದ್ಯಾನಿಲಯದಲ್ಲಿ ಕಾಲ ಕಾಲಕ್ಕೆ ಆಗುವ ಬದಲಾವಣೆಗಳಿಗೆ ಬದ್ಧನಾಗಿರುತ್ತೇನೆಂದು ಘೋಷಿಸುತ್ತೇನೆ.

ಸ್ಥಳ: ____________

ದಿನಾಂಕ: ____________

ಸಹಿ: ____________

(ಅಭ್ಯರ್ಥಿಯ ಸಹಿ)